30 September 2026 Wednesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ದೇಹಕ್ಕಾದ ಗಾಯ ಸ್ವಲ್ಪ ದಿನಗಳಲ್ಲಿ ಮಾಯವಾಗುತ್ತದೆ! ಮನಸ್ಸಿಗಾದ ಗಾಯ ವರ್ಷಗಳವರೆಗೂ ಕಾಡುತ್ತಲೇ ಇರುತ್ತದೆ!

-ಸ್ನೇಹಾ ಆನಂದ್



ಚುನಾವಣಾ ಆಯುಕ್ತರ ರಾಜೀನಾಮೆಗೆ ಯುವಕಾಂಗ್ರೆಸ್ ಆಗ್ರಹ — ಪುಟ ಸಂ. 2



ಮುಖ್ಯಚುನಾವಣಾ ಆಯುಕ್ತರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ — ಪುಟ ಸಂ. 3



ಚೋರ್‌ಗಳಿಗೆ ಜನ ಮತ ಹಾಕುತ್ತಿಲ್ಲ: ಛಲವಾದಿ ನಾರಾಯಣಸ್ವಾಮಿ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 284 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

### ಹಾಲಿನ ಪುಡಿ ಕಲಬೆರಕೆ ಪ್ರಕರಣ

# ಮನ್‌ಮುಲ್ ಮಾಜಿ ಅಧ್ಯಕ್ಷ ಶಿವಪ್ಪ ವಿಚಾರಣೆ

**ಮಂಡ್ಯ:** ಮನ್‌ಮುಲ್ ಹಾಲಿನ ಪುಡಿ ಕಲಬೆರಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೀಡಿದ್ದ ನೋಟೀಸ್ ಹಿನ್ನೆಲೆಯಲ್ಲಿ ಮಂಗಳವಾರ ಕಾಂಗ್ರೆಸ್ ಮುಖಂಡ ಹಾಗೂ ಮನ್‌ಮುಲ್ ಮಾಜಿ ಅಧ್ಯಕ್ಷ ಯು.ಸಿ.ಶಿವಕುಮಾರ್(ಉಮ್ಮಡಹಳ್ಳಿ ಶಿವಪ್ಪ) ಅವರು ತಮ್ಮ ವಕೀಲರೊಂದಿಗೆ ಮದ್ದೂರು ಪೊಲೀಸ್ ಠಾಣೆಗೆ ತೆರಳಿ ವಿಚಾರಣೆ ಎದುರಿಸುತ್ತಿದ್ದಾರೆ.

ಮನ್ ಮುಲ್ ಹಾಲಿನ ಪುಡಿಯಲ್ಲಿ ಕಲಬೆರಕೆ ನಡೆದಿರೋದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿತ್ತು.

ಈ ಪ್ರಕರಣದಲ್ಲಿ ಮನ್ಮುಲ್ ಮಾಜಿ ಅಧ್ಯಕ್ಷ ಯು.ಸಿ. ಶಿವಕುಮಾರ್ ಪಾತ್ರ ಇದೆ ಎಂಬ ಮಾತು ಕೇಳಿ ಬರುತ್ತಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮನ್ಮುಲ್ ಅಧಿಕಾರಿ ಅಶ್ವಿನಿ ದೂರು ನೀಡಿದ್ದರು.ಈ ಹಿನ್ನೆಲೆಯಲ್ಲಿ ಇಬ್ಬರು ಮನ್ಮುಲ್ ಅಧಿಕಾರಿಗಳಾದ ಪ್ರದೀಪ್ ಕುಮಾರ್ ಜಾಧವ್ ಹಾಗೂ ರಾಮಕೃಷ್ಣ ಎಂಬುವರ ಮೇಲೆ ಪ್ರಕರಣ ದಾಖಲಾಗಿ ಬಂಧಿಸಲಾಗಿತ್ತು.

**ಏನಿದು ಕಲಬೆರಕೆ ಕೇಸ್?**

ಮಂಡ್ಯ ಜಿಲ್ಲಾ ಹಾಲು ಒಕ್ಕೂಟ (ಮನ್‌ಮಲ್)ಕ್ಕೆ ಸೇರಿದ ಕೆನೆ ರಹಿತ ಹಾಲಿನ ಪುಡಿ ದಾಸ್ತಾನು ಮಾಡಲಾಗಿದ್ದ ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಮೆ.ಮಾಸ್ಟರ್ ಇಲ್ಯೂಷನ್ ಐಎನ್‌ಸಿಯ 1ನೇ ಗೋದಾಮಿನಲ್ಲಿ ಹಾಲಿನ ಪುಡಿ ಕಲಬೆರಕೆ ಹಾಗೂ ಹಣ ವಂಚನೆ ಆಗಿರುವ ಪ್ರಕರಣ ಬೆಳಕಿಗೆ ಬಂದಿತ್ತು.

ಮನ್‌ಮುಲ್ ಮೆಗಾ ಡೇರಿಯಲ್ಲಿ 46 ಮೆಟ್ರಿಕ್ ಟನ್ ಸಾಮರ್ಥ್ಯದ ಹಾಲಿನ ಪುಡಿ ಘಟಕವಿದ್ದು, ಹಾಲಿನ ಪುಡಿ ಘಟಕದಿಂದ ಪ್ರತಿದಿನ ಅಂದಾಜು 25 ರಿಂದ 30 ಮೆಟ್ರಿಕ್ ಟನ್ ಹಾಲಿನ ಪುಡಿ ಉತ್ಪಾದನೆ ಮಾಡಲಾಗುತ್ತಿದೆ.

ವಾರ್ಷಿಕವಾಗಿ ಸರಾಸರಿ ಅಂದಾಜು 3 ಸಾವಿರ ಮೆಟ್ರಿಕ್ ಟನ್ ಕೆನೆಭರಿತ ಹಾಗೂ ಅಂದಾಜು 7.5 ರಿಂದ 8 ಸಾವಿರ ಮೆಟ್ರಿಕ್ ಟನ್ ಕೆನೆ ರಹಿತ ಹಾಲಿನ ಪುಡಿ ಉತ್ಪಾದನೆ ಮಾಡಲಾಗುತ್ತಿದೆ.

ನಂತರದ ದಿನಗಳಲ್ಲಿ ವಾಹನಕ್ಕೆ ಲೋಡ್ ಮಾಡಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿದಾಗ ದಾಸ್ತಾನು ಚೀಲಗಳ ಮೇಲೆ ಒಕ್ಕೂಟದ ಹೆಸರು ಮುದ್ರಣವಿಲ್ಲದ ಚೀಲಗಳು ಹಾಗೂ ದಾಸ್ತಾನಿನಲ್ಲಿ ಹಲವು ಮೆಟ್ರಿಕ್ ಟನ್‌ನಷ್ಟು ಹಾಲಿನಲ್ಲಿ ಪುಡಿ ಕಡಿಮೆ ಇರುವುದು ಕಂಡು ಬಂದಿತ್ತು.

## ಎಸ್‌ಐಟಿ ತನಿಖೆಗೆ ಆಗ್ರಹ

ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟಕ್ಕೆ ಸೇರಿದ ಕೆನೆರಹಿತ ಹಾಲಿನ ಪುಡಿ ದಾಸ್ತಾನುದಲ್ಲಿ ಕಂಡು ಬಂದಿರುವ 54.925 ಮೆಟ್ರಿಕ್ ಟನ್ ಕೊರತೆ, 60,000 ಕೆ.ಜಿ. ಹಾಲಿನ ಪುಡಿಯನ್ನು ಗೋದಾಮಿನಿಂದ ಸಾಗಿಸಲಾಗಿದ್ದರೂ ಸ್ಟಾಕ್ ದಾಖಲೆಗಳಲ್ಲಿ ಸರಿಯಾಗಿ ನಮೂದಿಸದಿರುವುದು, ಹಾಲಿನ ಪುಡಿಯಲ್ಲಿ ಕಂಡುಬಂದಿರುವ ಕಲಬೆರಕೆ ಹಾಗೂ ಈಖಖಂಖ ಪರೀಕ್ಷಾ ವರದಿಯಲ್ಲಿ ವ್ಯಕ್ತವಾಗಿರುವ ಗಂಭೀರ ಗುಣಮಟ್ಟದ ಅಕ್ರಮಗಳು ಸೇರಿದಂತೆ ಪ್ರಕರಣದ ಒಟ್ಟು ವ್ಯಾಪ್ತಿಯನ್ನು ಪರಿಗಣಿಸಿದಾಗ, ಇದು ಕೇವಲ ಇಬ್ಬರು ಅಧಿಕಾರಿಗಳ ವಿರುದ್ಧದ ಪ್ರಕರಣಕ್ಕೆ ಸೀಮಿತವಾಗಿರದೆ, ದಾಸ್ತಾನು ನಿರ್ವಹಣೆ, ಸಾಗಣೆ, ದಾಖಲೆ ನಿರ್ವಹಣೆ ಹಾಗೂ ಸಂಬಂಧಿತ ಅಧಿಕಾರಿಗಳು ಮತ್ತು ಇತರ ವ್ಯಕ್ತಿಗಳ ಪಾತ್ರದ ಕುರಿತು ಸಮಗ್ರ ತನಿಖೆ ಅಗತ್ಯವಿರುವ ಗಂಭೀರ ಪ್ರಕರಣವಾಗಿದೆ. ಆದ್ದರಿಂದ ಪ್ರಕರಣವನ್ನು ಸ್ಥಳೀಯ ಪೊಲೀಸ್ ಠಾಣೆಯ ತನಿಖೆಗೆ ಮಾತ್ರ ಸೀಮಿತಗೊಳಿಸದೆ ತನಿಖೆಯಲ್ಲಿ ಯಾವುದೇ ರಾಜಕೀಯ ಅಥವಾ ಆಡಳಿತಾತ್ಮಕ ಪ್ರಭಾವಕ್ಕೆ ಅವಕಾಶ ನೀಡದೆ,

ಪುಟ 2ಕ್ಕೆ







### ಕೆಪಿಎಸ್‌ಸಿ ಅಕ್ರಮ: ಲಾಡ್ಜ್‌ಗಳಲ್ಲೂ ತರಬೇತಿ

**ಬೆಂಗಳೂರು:** ಕೆಪಿಎಸ್‌ಸಿ ನೇಮಕಾತಿ ಹಗರಣ ಕೇಸ್‌ನ ವಿಚಾರಣೆಯಲ್ಲಿ ಸ್ಫೋಟಕ ವಿಚಾರ ಬಹಿರಂಗಗೊಂಡಿವೆ. ಅಭ್ಯರ್ಥಿಗಳಿಗೆ ರೆಸಾರ್ಟ್ಗಳಲ್ಲಿ ಮಾತ್ರವಲ್ಲ ಲಾಡ್ಜಳಲ್ಲೂ ತರಬೇತಿ ನೀಡಲಾಗುತ್ತಿತ್ತು ಎಂಬ ವಿಚಾರವನ್ನು ಐಎಎಸ್ ಅಧಿಕಾರಿ ಗ್ಯಾನೇಂದ್ರ ಒಪ್ಪಿಕೊಂಡಿದ್ದಾರೆ.

ಪ್ರಶ್ನೆ ಪತ್ರಿಕೆ ಹಂಚಿಕೆ ಮಾಡುವುದು ಮತ್ತು ಟ್ರೈನಿಂಗ್ ಜವಾಬ್ದಾರಿ ಕನ್ನಾಳೆ ಬಳಿಯಲ್ಲಿತ್ತು. ನಾನು ಕೇವಲ ಯಾವ ಎಕ್ಸಾಂ ಸೆಂಟರ್‌ಗೆ ಯಾವ ಸೀರಿಸ್ ಬರಲಿದೆ ಅಂತ ತಿಳಿಸಿದ್ದೆ. ಮೊದಲೇ ಮಾತನಾಡಿದಂತೆ ಎಕ್ಸಾಂ ಸೆಂಟರ್ ಪೇಪರ್ ಸೀರಿಸ್ ನಿಗದಿ ಮಾಡುತ್ತಿದ್ದೆ ಎಂದು ವಿಚಾರಣೆ ವೇಳೆ ಗ್ಯಾನೇಂದ್ರ ಬಾಯಿ ಬಿಟ್ಟಿದ್ದಾನೆ.

ಪ್ರಶ್ನೆಪತ್ರಿಕೆ ಹಂಚಿಕೆ ಮಾಡುವುದರಲ್ಲಿ ಕೂಡ ವಂಚನೆ ಬೆಳಕಿಗೆ ಬಂದಿದೆ. ಎಕ್ಸಾಂ ಸೆಂಟರ್ ಬಳಿ ಇರುವ ಲಾಡ್ಜ್‌ನಲ್ಲಿ ಅಭ್ಯರ್ಥಿಗಳು ಇದ್ದರು. ಆ ಲಾಡ್ಜ್‌ಳಿಗೆ ಹೋಗಿ ಕನ್ನಾಳೆ ಟ್ರೈನಿಂಗ್ ಕೊಟ್ಟಿದ್ದಾನೆ. ಆತನಿಂದ ನಾನು ಇದುವರೆಗೂ 1.7 ಕೋಟಿ ಹಣ ಪಡೆದಿದ್ದೇನೆ ಎಂದು ತಿಳಿಸಿದ್ದಾರೆ.

ಪಶುವೈದ್ಯಾಧಿಕಾರಿ ಪರೀಕ್ಷೆಯಲ್ಲಿ ಹಣ ಪಡೆದಿಲ್ಲ. ಅದಕ್ಕೂ ಮುನ್ನ ಹಣ ನೀಡಿದ್ದಾನೆ ಎಂದು ಇಡಿ ಮುಂದೆ ಸವಿಸ್ತಾರವಾಗಿ ಗ್ಯಾನೇಂದ್ರ ಹೇಳಿಕೆ ನೀಡಿದ್ದಾರೆ.

### ಸಚಿವ ಯತೀಂದ್ರಗೆ ಸಿಎಂ ಬ್ರೇಕ್?

**ತವರು ಕ್ಷೇತ್ರದಲ್ಲಿಯೇ ಸಿದ್ದರಾಮಯ್ಯ ಪುತ್ರನ ಪ್ರಾಬಲ್ಯಕ್ಕೆ ಕೊಕ್ಕೆ**



**ಮೈಸೂರು:** ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಆಚರಣೆಯಲ್ಲಿ ಸರ್ಕಾರ ಕೈಗೊಂಡಿರುವ ದಿಢೀರ್ ನಿರ್ಧಾರ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ, ಸಚಿವ ಯತೀಂದ್ರ ಪ್ರಾಬಲ್ಯಕ್ಕೆ ಅವರ ತವರಿನಲ್ಲಿಯೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಂತ್ರ ರೂಪಿಸಿ ಬ್ರೇಕ್ ಹಾಕಿದ್ದಾರೆಯೇ ಎಂಬ ಚರ್ಚೆ ಜೋರಾಗಿದೆ.

ಮೈಸೂರು ದಸರಾ ಇತಿಹಾಸದಲ್ಲೇ ಮೊದಲ ಬಾರಿಗೆ 22 ಸಚಿವರನ್ನು ದಸರಾ ಉತ್ಸವ ಉಸ್ತುವಾರಿಗೆ ನಿಯೋಜಿಸಲಾಗಿದೆ. 10 ದಿನಗಳ ಕಾಲ ನಡೆಯುವ ನಾಡಹಬ್ಬಕ್ಕೆ ಒಂದೊಂದು ದಿನದ ಕಾರ್ಯಕ್ರಮದ ಹೊಣೆಗಾರಿಕೆಯನ್ನು ಅಧಿಕೃತವಾಗಿ ಇಬ್ಬರು ಸಚಿವರಿಗೆ ವಹಿಸಿ ಆದೇಶಿಸಲಾಗಿದೆ.

ಪ್ರತಿ ವರ್ಷ ಇಡೀ ದಸರಾ ಮಹೋತ್ಸವದ ಸಂಪೂರ್ಣ ಉಸ್ತುವಾರಿಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೇ ವಹಿಸಿಕೊಳ್ಳುತ್ತಿದ್ದರು. ದಸರಾ ಉದ್ಘಾಟನೆಯಿಂದ ಹಿಡಿದು ಜಂಬೂಸವಾರಿಯವರೆಗೆ ಜಿಲ್ಲಾ ಉಸ್ತುವಾರಿ ಸಚಿವರದ್ದೇ ಸಂಪೂರ್ಣ ಹವಾ ಇರುತ್ತಿತ್ತು. ಆದರೆ ಈ ಬಾರಿ ಒಟ್ಟಾರೆ 22 ಸಚಿವರನ್ನು ಕಣಕ್ಕಿಳಿಸಿರುವುದು ಜಿಲ್ಲಾ ಉಸ್ತುವಾರಿ ಸಚಿವರ ಏಕಮೇವ ಅಬ್ಬರ ಮತ್ತು ಪಾರುಪತ್ಯಕ್ಕೆ ಕತ್ತರಿ ಹಾಕುವ ವ್ಯವಸ್ಥಿತ ರಾಜಕೀಯ ನಡೆ ಎಂಬ ಮಾತುಗಳು ಕೇಳಿಬರುತ್ತಿವೆ.

ಮೈಸೂರು ಭಾಗದಲ್ಲಿ ಸಂಪೂರ್ಣ ಹಿಡಿತ ಸಾಧಿಸಿರುವ ಡಾ.ಯತೀಂದ್ರ ಅವರ ಅತಿಯಾದ ಹಸ್ತಕ್ಷೇಪ ಮತ್ತು ಪ್ರಭಾವವನ್ನು ತಗ್ಗಿಸಲು, ಅವರನ್ನು ದಸರಾ ಮುನ್ನೆಲೆಯಿಂದ ಸೈಡಿಗೆ ಸರಿಸುವ ಉದ್ದೇಶದಿಂದಲೇ ಇಂತಹ ಯೋಜನೆಯನ್ನು ಜಾರಿಗೆ ತರಲಾಗಿದೆಯೇ ಎಂಬ ಚರ್ಚೆ ಪಕ್ಷದ ಆಂತರಿಕ ವಲಯದಲ್ಲಿ ಆರಂಭವಾಗಿದೆ.

ರಾಜಕೀಯ ಊಹಾಪೋಹಗಳಿಗೆ ತೆರೆ ಎಳೆಯಲು ಯತ್ನಿಸಿರುವ ಡಾ.ಯತೀಂದ್ರ, ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಇದು ಮುಖ್ಯಮಂತ್ರಿಗಳ ಹೊಸ ಪರಿಕಲ್ಪನೆ. ನಾಡಹಬ್ಬ ದಸರಾವನ್ನು ಇನ್ನಷ್ಟು ವ್ಯವಸ್ಥಿತವಾಗಿ ವಿಜೃಂಭಣೆಯಿಂದ ನಡೆಸಲು ಈ ಯೋಜನೆ ರೂಪಿಸಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

### ಕೆಎಸ್‌ಡಿಸಿ ಟೆಂಡರ್ ಅಕ್ರಮ: ಯತೀಂದ್ರ ವಿರುದ್ಧ ದೂರು

**ಬೆಂಗಳೂರು:** ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಡಿಯಲ್ಲಿರುವ ಕೆಎಸ್‌ಡಿಸಿ ಹಾಗೂ ಕೆಎಸ್‌ಡಬ್ಲುಎಎನ್‌ನಲ್ಲಿ 444 ಕೋಟಿ ಹಗರಣ ಕೇಳಿಬಂದಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಸಚಿವ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ಕೆ ದೂರು ಸಲ್ಲಿಕೆಯಾಗಿದೆ.

ಯತೀಂದ್ರ ಮತ್ತು ಐಎಎಸ್ ಅಧಿಕಾರಿ ಭೂಬಾಲನ್ ವಿರುದ್ಧ ದಾಖಲೆ ಸಮೇತ ಬಿಜೆಪಿ ಮುಖಂಡ ಎನ್. ಆರ್ ರಮೇಶ್ ದೂರು ನೀಡಿದ್ದಾರೆ. 2025ರಲ್ಲಿ ಕರೆದಿದ್ದ ಟೆಂಡರ್ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ನಡೆದಿದೆ. ಅರ್ಹತೆ ಇಲ್ಲದ ಕಂಪನಿಗೆ ಟೆಂಡರ್

ಪುಟ 2ಕ್ಕೆ

# ಡಿಕೆಶಿಗೆ ಪಂಥಾಹ್ವಾನ ನೀಡಿದ ಎಚ್‌ಡಿಕೆ

## ನೈಸ್ ಯೋಜನೆ ದೊಡ್ಡ ಹಗರಣ: ಚರ್ಚೆಗೆ ಬರುವಂತೆ ಸವಾಲು

**ಬೆಂಗಳೂರು:** ನೈಸ್ ಯೋಜನೆ 2ಜಿ ಸ್ಕ್ಯಾಮ್, ಕೋಲ್ ಸ್ಕ್ಯಾಮ್‌ಗಿಂತ ದೊಡ್ಡ ಹಗರಣ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತಾಡಿದ ಅವರು, ಯೋಜನೆ ಹೆಸರಲ್ಲಿ ರೈತರ ಬದುಕಿನ ಜೊತೆ ಚೆಲ್ಲಾಟವಾಡ್ತಿದ್ದಾರೆ. ಇದೆಲ್ಲವನ್ನ ದಾಖಲೆ ಸಮೇತ ಹೇಳುವೆ ಎಂದು ಕಿಡಿಕಾರಿದರು.

ನೈಸ್ ಯೋಜನೆ ಕುಮಾರಸ್ವಾಮಿ ಕೂಸು, ದೇವೇಗೌಡರ ಕೂಸು ಎಂದು ಸಿಎಂ ಡಿ.ಕೆ ಶಿವಕುಮಾರ್ ಹೇಳಿದ್ದಾರೆ. ಈ ಬಗ್ಗೆ ವಿಧಾನಸೌಧದ ಮೆಟ್ಟಿಲ ಮೇಲೆ ಚರ್ಚೆಗೂ ನಾನು ಸಿದ್ಧ ಎಂದು ಸಿಎಂ ಡಿ.ಕೆ ಶಿವಕುಮಾರ್ ಅವರಿಗೆ ಮತ್ತೆ ಎಚ್.ಡಿ.ಕುಮಾರಸ್ವಾಮಿ ಬಹಿರಂಗ ಚರ್ಚೆಗೆ ಆಗಮಿಸುವಂತೆ ಸವಾಲು ಹಾಕಿದರು.

ನೈಸ್ ಯೋಜನೆಗೆ ಸಹಿ ಹಾಕಿದ್ದು ದೇವೇಗೌಡರು ಎಂದು ಪದೇ ಪದೇ ಹೇಳ್ತಾರೆ. 8–11–1995ರಲ್ಲಿ ಮೆಮೋರಂಡಮ್ ಮಾಡಿರೋದು. ಅಗ್ರಿಮೆಂಟ್ 3 ಏಪ್ರಿಲ್ 1997ರಂದು ಆಗುತ್ತದೆ. ಆಗ ಎಲ್ಲಿಯೂ ಸಹ ಕೃಷಿಗೆ ಉತ್ತಮವಾದ ಭೂಮಿಯನ್ನು ಯೋಜನೆಗೆ ಗುರುತಿಸಿಲ್ಲ. ಒಣ ಭೂಮಿಯನ್ನ ತೆಗೆದುಕೊಳ್ಳಲು ತೀರ್ಮಾನ ಆಗಿತ್ತು. ಕೆರೆ ಜಾಗ ಕೂಡ ಬಳಸಬಾರದು ಅಂತ ಉಲ್ಲೇಖ ಆಗಿತ್ತು ಎಂದು ಕುಮಾರಸ್ವಾಮಿ ತಿಳಿಸಿದರು.

ಆಗ ಸಿಎಂ ಆಗಿದ್ದ ಜೆ.ಎಚ್.ಪಟೇಲ್, ದೇವೇಗೌಡರಿಂದ ಏನೂ ತಪ್ಪಾಗಿರಲಿಲ್ಲ. ಅವರಿಗೆ ಯೋಜನೆ ಬೇಕಾಗಿತ್ತು ಅಷ್ಟೇ. ಫ್ರೇಮ್‌ವಗ್ರಿಮೆಂಟ್ ಅಂತಿಮ ಎಂದು 1998ರಲ್ಲಿ ಸುಪ್ರೀಂಕೋರ್ಟ್ ಸಹ ಹೇಳಿದೆ. ಆ ಬಳಿಕ ತ್ರೀ ಪಾರ್ಟಿ ಅಗ್ರಿಮೆಂಟ್‌ನ 2002ರಲ್ಲಿ ಮಾಡ್ತಾರೆ. ನೈಸ್, ನೇಸ್ ಹಾಗೂ ರಾಜ್ಯ ಸರ್ಕಾರದ ನಡುವೆ ತ್ರಿಪಾರ್ಟಿ ಅಗ್ರಿಮೆಂಟ್ ಆಗಿದೆ. ಇದು ಆಕ್ಸ್‌ಫರ್ಡ್ ಯುನಿವರ್ಸಿಟಿ ಅವರು ಮಾಡಿರೋದು. ಆಗ





ಎಐ ಚಿತ್ರ

### ವಿಧಾನಸೌಧ ನನಗೆ ಬರೆದು ಕೊಡ್ಬೇಕಾಗುತ್ತೆ!

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಅಶೋಕ್ ಖೇಣಿ ಮಾತನಾಡಿದ್ದಾರೆ ಎನ್ನಲಾದ ಆಡಿಯೋವೊಂದನ್ನು ಎಚ್.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು.

ಆಡಿಯೋದಲ್ಲಿ ಅಶೋಕ್ ಖೇಣಿ ವಿಧಾನಸೌಧ ಅಥವಾ ವಿಕಾಸಸೌಧವನ್ನು ನನಗೆ ಬರೆದು ಕೊಡ್ಬೇಕಾಗುತ್ತೆ ಎಂದಿದ್ದಾರೆ. ನನಗೆ

ಪುಟ 2ಕ್ಕೆ

### ದಾರಿ ತಪ್ಪಿದ ಶಿಶು: ತಂದೆ–ತಾಯಿ ಜವಾಬ್ದಾರಿ!

ಒಂದು ಮಗು ಹುಟ್ಟಿದಾಗ ಅದು ಒಳ್ಳೆಯ ದಾರಿಯಲ್ಲಿ ಬೆಳೆಯಬೇಕು ಎನ್ನುವುದು ತಂದೆ–ತಾಯಿ ಆಶಯ. ಆದರೆ ಆ ಮಗು ದಾರಿ ತಪ್ಪುತ್ತಿದೆ ಎಂದು ಗೊತ್ತಾದಾಗ, ಅದನ್ನು ಸರಿದಾರಿಗೆ ತರುವ ಜವಾಬ್ದಾರಿ ತಂದೆ–ತಾಯಿಯದ್ದಲ್ಲವೇ? ನೈಸ್ ಎಂಬ 'ಶಿಶು' ದಾರಿ ತಪ್ಪುತ್ತಿದೆ ಎಂದು

ಪುಟ 2ಕ್ಕೆ

### ಎಚ್‌ಡಿಕೆ ಸಿಎಂ ಆಗಿದ್ದಾಗ ಏಕೆ ಕ್ರಮಕೈಗೊಳ್ಳಲಿಲ್ಲ?

**ಸಚಿವ ಎನ್.ಚಲುವರಾಯಸ್ವಾಮಿ ತಿರುಗೇಟು**

**ಬೆಂಗಳೂರು:** ಎಚ್.ಡಿ.ಕುಮಾರಸ್ವಾಮಿ ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿ ಆಗಿದ್ದರು. ನೈಸ್ ಯೋಜನೆಯಲ್ಲಿ ಎಲ್ಲವೂ ಸರಿ ಇಲ್ಲದಿದ್ದರೆ ತಮ್ಮ ಅಧಿಕಾರಾವಧಿಯಲ್ಲೇ ಅದನ್ನು ಸರ್ಕಾರದ ವಶಕ್ಕೆ ಪಡೆಯಲು ಏಕೆ ಕ್ರಮಕೈಗೊಳ್ಳಲಿಲ್ಲ ಎಂದು ಸಚಿವ ಎನ್.ಚಲುವರಾಯಸ್ವಾಮಿ ತಿರುಗೇಟು ನೀಡಿದರು.

ನೈಸ್ ಯೋಜನೆ ಕುರಿತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ಮಾಡುತ್ತಿರುವ ಆರೋಪ ಕುರಿತು ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನೈಸ್ ಯೋಜನೆ ಇತಿಹಾಸವನ್ನು ಮರೆತು ಇಂದು ಆರೋಪ ಮಾಡುವುದು ಸರಿಯಲ್ಲ ಎಂದು ಟೀಕಿಸಿದರು.

ನೈಸ್ ಯೋಜನೆ ಮೂಲ ಒಪ್ಪಂದ ಮತ್ತು ಯೋಜನಾ ಪ್ರಕ್ರಿಯೆ 1995ರಲ್ಲಿ ಅಂದಿನ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡ ಅವಧಿಯಲ್ಲೇ ನಡೆಯಿತು. ಇಂದು ಇದೇ ಯೋಜನೆ ಬಗ್ಗೆ ಕುಮಾರಸ್ವಾಮಿ ಪ್ರಶ್ನೆ ಮಾಡುತ್ತಿರುವುದು ಸಾರ್ವಜನಿಕರ

ಪುಟ 2ಕ್ಕೆ







# ನಿರುದ್ಯೋಗಿಗಳಿಗೆ ಯುವನಿಧಿ ಆಶಾದೀಪ: ಅರುಣಕುಮಾರ್




ಮೈಸೂರು: ಯವನಿಧಿ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಯಾಗಿದ್ದು, ನಿರುದ್ಯೋಗಿಗಳಿಗೆ ಆಶಾದೀಪವಾಗಿದೆ. ಕಾಲೇಜುಗಳಲ್ಲಿ ಹೆಚ್ಚು ಅರಿವು ಕಾರ್ಯಕ್ರಮಗಳನ್ನು ಆಯೋಜಿಸಿ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಅರುಣ್ ಕುಮಾರ್ ತಿಳಿಸಿದರು.

ಹೆಚ್.ಡಿ.ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಯೋಗದಲ್ಲಿ ಯುವನಿಧಿ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪದವಿ, ಡಿಪ್ಲೋಮಾ ಪಡೆದ ನಂತರ 180 ದಿನಗಳ ಕಾಲ ಕಳೆದರೂ ಉದ್ಯೋಗ ದೊರಕದಿದ್ದರೆ ಅನುಕ್ರಮವಾಗಿ 3000 ಹಾಗೂ 1500 ನಿರುದ್ಯೋಗ ಭತ್ಯೆ ನೀಡಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರದ ಉಪಾಧ್ಯಕ್ಷ ಪ್ರೊ.ಶಿವಕುಮಾರ್ ಹಾಗೂ ಹುಣಸೂರು ಬಸವಣ್ಣ, ಪ್ರಾಧಿಕಾರದ ಸದಸ್ಯರಾದ ಸಾ.ಮಾ. ಯೋಗೇಶ್, ಎಚ್.ಡಿ.ಕೋಟೆ ತಾಲೂಕು ಗ್ಯಾರಂಟಿ ಯೋಜನಾ ಪ್ರಾಧಿಕಾರದ ಚಾಮರಾಜು, ಸರಗೂರು ಗ್ಯಾರಂಟಿ ಯೋಜನಾ ಅಧ್ಯಕ್ಷ ಚೆಲುವರಾಜು, ಎಚ್.ಡಿ.ಕೋಟೆ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ ಎಸ್. ರವಿಚಂದ್ರ ಇತರರು ಪಾಲ್ಗೊಂಡಿದ್ದರು.

# ನಿಲ್ಲದ ಓವರ್‌ಲೋಡ್ ಟಿಪ್ಪರ್ ಸಂಚಾರ: ಅಧಿಕಾರಿಗಳ ವಿರುದ್ಧ ಆಕ್ರೋಶ

ಗುಂಡ್ಲುಪೇಟೆ, ಸೆ.28:ತಾಲೂಕಿನ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿಯಮ ಮೀರಿ ಅಧಿಕ ಭಾರ ಹೊತ್ತು ಟಿಪ್ಪರ್‌ಗಳು ಸಂಚರಿಸುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ಅಧಿಕ ಭಾರ ಹೊತ್ತು ಸಾಗುವ ಟಿಪ್ಪರ್‌ಗಳಿಂದ ಅಪಘಾತದ ಆತಂಕ ಎದುರಾಗಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರು ಭಯದಿಂದ ಸಂಚರಿಸುವಂತಾಗಿದೆ. ಇತ್ತೀಚೆಗಷ್ಟೇ ಅಧಿಕ ಭಾರ ಹೊತ್ತ ಟಿಪ್ಪರ್‌ನಿಂದ ಕಾರಿನ ಮೇಲೆ ವಸ್ತು ಬಿದ್ದು ಕಾರು ಜಖಂಗೊಂಡ ಘಟನೆ ನಡೆದಿದ್ದರೂ, ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಓವರ್‌ಲೋಡ್ ಟಿಪ್ಪರ್‌ಗಳ ಸಂಚಾರಕ್ಕೆ ಕಡಿವಾಣ ಹಾಕುವಂತೆ ಹಲವು ಬಾರಿ ಪತ್ರಿಕೆಗಳಲ್ಲಿ ಪ್ರಕಟಣೆಯಾಗಿದ್ದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಅಪಘಾತಗಳು ಸಂಭವಿಸಿದ ಬಳಿಕ ಕ್ರಮ ಕೈಗೊಳ್ಳುವುದಕ್ಕಿಂತ ಮುನ್ನವೇ ನಿಯಮ ಉಲ್ಲಂಘಿಸುವ ವಾಹನಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಪ್ರಜಾಶಕ್ತಿ ವೇದಿಕೆ (ರಿ ) ಸಂಘಟನೆಯ ರಾಜ್ಯಾಧ್ಯಕ್ಷ ಅಶೋಕ್ ರಾಜ್ ಒತ್ತಾಯಿಸಿದ್ದಾರೆ.



## ಮೊದಲ ಪುಟದಿಂದ

### ಕೆಎಸ್‌ಡಿಸಿ ಟೆಂಡರ್ ಅಕ್ರಮ: ಯತೀಂದ್ರ ವಿರುದ್ಧ ದೂರು

ನೀಡಿದ್ದಾರೆ ಎಂದು ದೂರಲಾಗಿದೆ. ಟೆಂಡರ್ ಪ್ರಕ್ರಿಯೆ ಸಿದ್ದರಾಮಯ್ಯ ಸಿಎಂ ಆಗಿದ್ದ ಅವಧಿಯಲ್ಲಿ ನಡೆದಿದೆ. ಆಗ ಸಿದ್ದರಾಮಯ್ಯ ತಮ್ಮ ಬಳಿಯೇ ಕೆಎಸ್‌ಡಿಸಿ ಇಲಾಖೆ ಉಳಿಸಿಕೊಂಡಿದ್ದರು. ಹೀಗಾಗಿ ಯತೀಂದ್ರ ಅಣತಿ ಮೇರೆಗೆ ಟೆಂಡರ್ ನೀಡಿದ ಆರೋಪ ಕೇಳಿಬಂದಿದೆ. ಅರ್ಹತೆಯೇ ಇಲ್ಲದ ಹೈದರಾಬಾದ್ ಮೂಲದ ಕಂಪನಿಗೆ ಟೆಂಡರ್ ನೀಡಲಾಗಿದೆ. ಇ-ಆಡಳಿತ ವಿಭಾಗದ ಸಿಇಒ ಅಧಿಕಾರಿ ಭೂಪಾಲನ್ ಸೇರಿದಂತೆ ಮೂವರು ಅಧಿಕಾರಿಗಳ ವಿರುದ್ಧವೂ ದೂರು ನೀಡಲಾಗಿದೆ.

### ಎಚ್‌ಡಿಕೆ ಸಿಎಂ ಆಗಿದ್ದಾಗ ಏಕೆ ಕ್ರಮಕೈಗೊಳ್ಳಲಿಲ್ಲ?

ಮುಂದೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಇದು ಮೂರು ದಶಕಗಳ ಇತಿಹಾಸ ಹೊಂದಿರುವ ಯೋಜನೆ ಎಂದು ತಿರುಗೇಟು ನೀಡಿದರು.

### ಡಿಕೆಶಿಗೆ ಎಚ್‌ಡಿಕೆ ಪಂಥಾಹ್ವಾನ

ನಗರಾಭಿವೃದ್ಧಿ ಸಚಿವ ಆಗಿದ್ದವರು ಡಿಕೆ ಶಿವಕುಮಾರ್. 2004ರಲ್ಲಿ ಫ್ರೇಮ್ ವರ್ಕ್ ಅಗ್ರಿಮೆಂಟ್ ಬದಲಾವಣೆ ಮಾಡಿ ಅಕ್ರಮ ಮಾಡಿದರು ಎಂದು ಕುಮಾರಸ್ವಾಮಿ ಆರೋಪ ಮಾಡಿದರು.

### ದಾರಿ ತಪ್ಪಿದ ಶಿಶು: ತಂದೆ-ತಾಯಿ ಜವಾಬ್ದಾರಿ!

ಅನಿಸಿದ್ದರೆ, ಅದನ್ನು ನಿಮ್ಮ ಅಧಿಕಾರಾವಧಿಯಲ್ಲೇ ಸರಿಪಡಿಸಬೇಕಿತ್ತು. ಆಗಲೇ ಕ್ರಮ ಕೈಗೊಂಡಿದ್ದರೆ ಇಂದು ಮತ್ತೊಬ್ಬರ ಮೇಲೆ ಆರೋಪ ಮಾಡುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಚಲುವರಾಯಸ್ವಾಮಿ ಕುಟುಕಿದರು.

### ವಿಧಾನಸೌಧ ನನಗೆ ಬರೆದು ಕೊಡ್ಬೇಕಾಗುತ್ತೆ!

2 ಲಕ್ಷ ಕೋಟಿ ಕೊಡಬೇಕಾಗುತ್ತದೆ. ಈ ಸರ್ಕಾರ ಗ್ಯಾರಂಟಿಗೆ ಹಣ ಕೊಟ್ಟು ಬರಬಾದಾಗಿದೆ. ನನಗೆಲ್ಲಿ ಹಣ ಕೊಡಲು ಆಗುತ್ತದೆ. ವ್ಯಾಜ್ಯ ಎಂದು ಕೋರ್ಟ್‌ಗೆ ಹೋದರೆ. ವಿಧಾನಸೌಧವನ್ನೇ ಬರೆದು ಕೊಡ್ಬೇಕಾಗುತ್ತೆ ಎಂದು ಖೇಣಿ ಹೇಳಿದ್ದಾರೆ ಎನ್ನಲಾದ ಆಡಿಯೋ ರಿಲೀಸ್ ಮಾಡಿದರು. ಅಲ್ಲದೆ ಇದು ಪಾರ್ಟ್ 1 ಅಷ್ಟೇ, ಇನ್ನೂ ಪಾರ್ಟ್ 2 ಮತ್ತು 3 ಸಹ ಶೀಘ್ರದಲ್ಲೇ ಬಿಡುಗಡೆ ಮಾಡುವುದಾಗಿ ಎಚ್‌ಡಿಕೆ ಮತ್ತೊಂದು ಬಾಂಬ್ ಸಿಡಿಸಿದರು.

# ಚುನಾವಣಾ ಆಯುಕ್ತರ ರಾಜೀನಾಮೆಗೆ ಯುವಕಾಂಗ್ರೆಸ್ ಆಗ್ರಹ

ಮೈಸೂರು: ದೇಶದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಈ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಯುವ ಕಾಂಗ್ರೆಸ್ ಸಮಿತಿ ಸದಸ್ಯರು ನಾನಾ ಘೋಷಣೆ ಕೂಗಿ ಆಕ್ರೋಶ ಹೊರಹಾಕಿ ಪ್ರತಿಭಟಿಸಿದರು.

ನಗರದ ರಾಮಸ್ವಾಮಿ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಜ್ಞಾನೇಶ್ ಕುಮಾರ್ ಭಾವಚಿತ್ರ ಹಿಡಿದು ನಾನಾ ಘೋಷಣೆ ಕೂಗಿದರು. ಈ ವೇಳೆ ಮಾತನಾಡಿದ ಯುವಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ನಜ್ಮಾ ನಜೀರ್, ದೇಶದಲ್ಲಿ ಒಬ್ಬ ಮುಖ್ಯ ಚುನಾವಣಾ ಆಯುಕ್ತ ಮತಿಬ್ಬರೂ ಚುನಾವಣಾ ಆಯುಕ್ತರು ದೇಶದ ಚುನಾವಣಾ ಆಯೋಗದಲ್ಲಿದ್ದಾರೆ. ಆದರೆ, ಎಸ್‌ಐಆರ್ ವಿಚಾರದಲ್ಲಿ ಇಬ್ಬರೂ ಚುನಾವಣಾ ಆಯುಕ್ತರ ಸಲಹೆಯನ್ನೇ ಸ್ವೀಕರಿಸದೇ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಬಿಜೆಪಿ ಹಾಗೂ ಚಡ್ಡಿಗಳ ಹೇಳಿಕೆಗೆ ಅನುಗುಣವಾಗಿ ಎಸ್‌ಐಆರ್ ಜಾರಿ ಮಾಡುತ್ತಿದ್ದಾರೆ. ಇದೇ ಕಾರಣದಿಂದ ದೇಶದ ಹಲವು ರಾಜ್ಯದಲ್ಲಿ ನಿಯಮ ಬಾಹಿರವಾಗಿ ಗೆದ್ದಿದ್ದಾರೆಂದು ಹೇಳಿದರು.

ರಾಜ್ಯದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ಸುಭದ್ರವಾಗಿದೆ. ಹೀಗಾಗಿ ಇದನ್ನು ತೆಗೆಯುವ ನಿಟ್ಟಿನಲ್ಲಿ ಎಸ್‌ಐಆರ್ ಮೂಲಕ ಕಾಂಗ್ರೆಸ್ ಮತದಾರರನ್ನು ತೆಗೆಯುವ ಕಾರ್ಯಕ್ಕೆ ಬಿಜೆಪಿ ಸರ್ಕಾರ ಚುನಾವಣಾ ಆಯೋಗವನ್ನು ಬಳಸಿಕೊಳ್ಳುತ್ತಿದೆ. ಇವರ ಷಡ್ಯಂತ್ರ ಈಗ ಬಯಲಾಗಿದೆ. ಹೀಗಾಗಿ ಕೂಡಲೇ ಅವರು ರಾಜೀನಾಮೆ ನೀಡಬೇಕು. ಅಲ್ಲದೆ, ಈ ಬಗ್ಗೆ ಬಿಜೆಪಿ ನರೇಂದ್ರಮೋದಿ ಮಾತನಾಡಬೇಕು. ದೇಶದ ಜನರ ಕ್ಷಮೆಯಾಚಿಸಿ, ಎಸ್‌ಐಆರ್ ರದ್ದು ಮಾಡಬೇಕು. ನಾವು ಎಸ್‌ಐಆರ್ ಗೆ ವಿರೋಧಿಗಳಲ್ಲ ಬದಲಿಗೆ ಬಿಜೆಪಿ ಬೆಂಬಲಿತ ಎಸ್‌ಐಆರ್‌ಗೆ ನಮ್ಮ ವಿರೋಧವಿದೆ. ಸಂವಿಧಾನ ಎಸ್‌ಐಆರ್‌ಗೆ ನಮ್ಮ ವಿರೋಧವಿದೆ ಎಂದು ಹೇಳಿದರು.




ಮೈಸೂರು ಜಿಲ್ಲಾ ಯುವಕಾಂಗ್ರೆಸ್ ಅಧ್ಯಕ್ಷ ಚಂದನ್‌ಗೌಡ ಮಾತನಾಡಿ, ದೇಶದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಈ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಅವರ ಕಪಟ ನಾಟಕ ಬಯಲಾಗಿದೆ. ಅವರ ಜತೆಗಿರುವ ಸಮೃದ್ ಹಾಗೂ ವಿವೇಕ್ ಜೋಶಿ 14ಬಾರಿ ಎಸ್‌ಐಆರ್ ವಿರೋಧಿಸಿ ಪತ್ರ ಬರೆದಿರುವುದು ಬಹಿರಂಗ ಆಗಿದೆ. ಮೋದಿ, ಅಮಿತ್ ಶಾ ಅವರು ಇದಕ್ಕೆ ಉತ್ತರ ಕೊಡಬೇಕು. ಜ್ಞಾನೇಶ್ ಕುಮಾರ್ ರನ್ನು ಎಷ್ಟು ಕೋಟಿ ಡೀಲ್ ಮಾಡಿದ್ದೀರಿ. ಬಿಜೆಪಿ ಎಲೆಕ್ಷನ್ ಕಮಿಷನ್ ಎಂದು ಮಾಡಿಕೊಂಡು ಅದಕ್ಕೆ ಅಧ್ಯಕ್ಷನನ್ನಾಗಿ ಮಾಡಿಕೊಳ್ಳಿ. ಈಗಲಾದರೂ ಈ ಬಗ್ಗೆ ಮಾತನಾಡಿ, ರಾತ್ರಿ ಲೈವ್ ಬಂದೂ ಮಾತನಾಡುವುದು ಬಿಟ್ಟರೇ ಬೇರೆನೂ ಗೊತ್ತಿಲ್ಲ. ಎಸ್‌ಐಆರ್ ವೈಜ್ಞಾನಿಕವಾಗಿ ಮಾಡಬೇಕಿತ್ತು. ಏಕಮುಖವಾಗಿ ಮಾಡಿದ್ದಿರಿ. ಹೀಗಾಗಿ ಚುನಾವಣಾ ಆಯುಕ್ತರು ಈಗ ರಾಜೀನಾಮೆ ನೀಡಬೇಕು. ರಾಷ್ಟ್ರಪತಿಗಳು ಮದ್ಯ ಪ್ರವೇಶಿಸಬೇಕೆಂದು ಆಗ್ರಹಿಸಿದರು. ಎಸ್‌ಐಆರ್ ಹೆಸರಿನಲ್ಲಿ ಮತದಾನದ ಹಕ್ಕನ್ನು ಕಸಿಯುವುದು ಯಾವ ರೀತಿಯ ಪ್ರಜಾಪ್ರಭುತ್ವ ನಿಜಕ್ಕೂ ಬಿಜೆಪಿ ಹಾಗೂ ಸಂವಿಧಾನದ ಮೇಲೆ ನಂಬಿಕೆ ಇದ್ದರೆ ಮೊದಲು ಎಸ್‌ಐಆರ್ ನಿಷೇಧಿಸಿ ಎಲ್ಲರಿಗೂ ಮತದಾನದ ಹಕ್ಕು ನೀಡುವ ಕೆಲಸ ಮಾಡಲಿ. ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕಿತ್ತು. ಏಕಾಏಕಿ ಮಾಡುವುದು ಸರಿಯಲ್ಲ. ಇವರು ರಾಜೀನಾಮೆ ನೀಡುವವರೆಗೂ ನಾವು ಹೋರಾಟ ಮುಂದುವರೆಸುತ್ತೇವೆಂದು ಹೇಳಿದರು. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿದರು. ಗ್ರಾಮಾಂತರ ಉಪಾಧ್ಯಕ್ಷೆ ಪೂಜಾ, ಹುಣಸೂರು ಬ್ಲಾಕ್ ಅಧ್ಯಕ್ಷ ದರ್ಶನ್, ಗ್ರಾಮಾಂತರ ಉಪಾಧ್ಯಕ್ಷ ಫೈಜ್ ಮಹಮ್ಮದ್, ಯುವ ಕಾಂಗ್ರೆಸ್ ಶಶಾಂಕ್ ಇನ್ನಿತರರು ಉಪಸ್ಥಿತರಿದ್ದರು.

# ಗಣೇಶೋತ್ಸವದಿಂದ ಬಾಂಧವ್ಯ ವೃದ್ಧಿ

## ಕೆ.ಶೇಷಾದ್ರಿ ಅಭಿಮತ । ಅಂಜನಾಪುರದಲ್ಲಿ ಹಿಂದು ಮಹಾ ಗಣಪತಿ ವಿಸರ್ಜನೆ

ರಾಮನಗರ: ಸ್ವಾತಂತ್ರ್ಯ ಪೂರ್ವದಲ್ಲಿ ಜನರನ್ನು ಒಗ್ಗೂಡಿಸಲು ಬಾಲ ಗಂಗಾಧರ ತಿಲಕರು ಸಾರ್ವಜನಿಕ ಗಣೇಶೋತ್ಸವ ಆಚರಣೆ ಜಾರಿಗೆ ತಂದರು. ಇದೇ ಕಲ್ಪನೆ ಇಂದಿಗೂ ಜನರನ್ನು ಒಗ್ಗೂಡಿಸಲು ಗಣೇಶೋತ್ಸವಗಳು ಸಾಕಾರವಾಗುತ್ತಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕೈಲಾಂಚ ಹೋಬಳಿಯ ಅಂಜನಾಪುರ ಗ್ರಾಮದಲ್ಲಿ ಹಿಂದು ಮಹಾಗಣಪತಿ ಸೇವಾ ಸಮಿತಿಯವರು ಪ್ರತಿಷ್ಠಾಪಿಸಿದ್ದ ಹಿಂದು ಮಹಾ ಗಣಪತಿ ಮೂರ್ತಿಯ ವಿಸರ್ಜನಾ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಗಣೇಶೋತ್ಸವಗಳು ಜನರಲ್ಲಿ ವಿಶೇಷವಾಗಿ ಯುವ ಸಮುದಾಯದಲ್ಲಿ

ಯುವಕರಲ್ಲಿ ಒಗ್ಗಟ್ಟು, ವಿಶ್ವಾಸ, ಪರಸ್ಪರರಲ್ಲಿ ಆತ್ಮೀಯತೆ ಮೂಡಿಸುತ್ತಿವೆ ಎಂದರು.

ಗ್ರಾಮಾಂತರ ಭಾಗಗಳಲ್ಲಿ ಗಣೇಶೋತ್ಸವಗಳು ಸಮಾಜದ ಸಾಮರಸ್ಯ ಕಾಪಾಡಲು ಸಹಕಾರಿಯಾಗುತ್ತಿವೆ ಎಂದರು.

ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ ಮಾತನಾಡಿ ಅಂಜನಾಪುರ ಗ್ರಾಮದಲ್ಲಿ ಹಿಂದು ಮಹಾಗಣಪತಿಯನ್ನು ಪ್ರತಿಷ್ಠಾಪನೆ ಮಾಡಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ್ದಾರೆ. ಸಾವಿರಾರು ಜನರು ಗಣಪತಿ ದರ್ಶನ ಪಡೆದಿದ್ದಾರೆ. ಮುಂದೆ ಮತ್ತಷ್ಟು ವೈಶಿಷ್ಟ್ಯ ಗಣೇಶ ಆಚರಣೆಯನ್ನು ಹಿಂದು ಮಹಾ ಗಣಪತಿ ಸಮಿಯ ಸದಸ್ಯರು ನೆರವೇರಿಸಲು ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರುಗಳಾದ ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸೂರಿ. ನಗರಸಭಾ ಸದಸ್ಯ ನರಸಿಂಹ. ರಾಮನಗರ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ಪ್ರವೀಣ್. ನಗರಸಭೆ ಆರ್ ಐ ನಾಗರಾಜು. ಹರೀಶ್. ವೆಂಕಟೇಶಯ್ಯ. ಬಾಲಗೇರಿ ರವಿ ಕುಂಬಾಪುರ ಸಿದ್ದಯ್ಯ. ಬೀರೇಶ್.



ಮಹದೇವಸ್ವಾಮಿ. ಮರಿಯಣ್ಣ. ಅಂಜನಾಪುರ ವಾಸು. ಗಿರಿಯಪ್ಪ. ಹಾಗೂ ಮಹದೇವ್(ಹಿಂದೂ ಮಹಾಗಣಪತಿ ಸೇವಾ ಸಮಿತಿ ಮುಖಂಡರು ), ಕಿರಣ್, ವೀರಣ್ಣ ಶಾಸ್ತ್ರೀ, ಪಿ. ನಾಗರಾಜ್ (VSSN ಮಾಜಿ ಅಧ್ಯಕ್ಷರು ), ರುದ್ರೇಶ್, ವಾಸ್, VSSN ಅಧ್ಯಕ್ಷರು, ಬೆಂಕಿ ಮಹದೇವ್, ಪುಟ್ಟಸ್ವಾಮಿ, ಲಕ್ಕಹೆಗ್ಡೆ ಪುಟ್ಟರಾಜು, ಜಯಶಂಕರ್, ಸುರೇಶ್, ರೇಣುಕಾ, ರಾಜಣ್ಣ, ಮೈಕ್ ನಾಗರಾಜ್, ಬಸವರಾಜ್ NVB, ಆಟೋ ಶಾಸ್ತ್ರೀ, ಆಟೋ ಚಂದ್ರು, ರಂಗಪ್ಪ, ಗೋಬಿ ಮಹದೇವ್, ಕುಮಾರ್, ಗಣೇಶ್, ರೇವಣ್ಣ, ದಿಲೀಪ್,ಕುಮಾರ್, ಮಂಜುನಾಥ್, ಕೀರ್ತಿ, ಶಿವರಾಜ್, ರಾಜಕುಮಾರ್, ಚೇತನ್, ಮರೀದೇವ್ರು, ನವೀನ್, ನಂದೀಶ್, ಮೂರ್ತಿ. ರಾಜಶೇಖರ್, ಯಶ್, ವಿನಯ್, ಸದಾ, ಮಹೇಶ್, ನಾಗೇಶ್ ಟಿಟಟಿ, ವಿಕ್ಕಿ, ಪ್ರತಾಪ್, ರೇವ, ಶಿವು ಕರಿಯಪ್ಪ, ವೆಂಕಟ್, ನಿಶಾಂತ್, ಹಾಗೂ ಗ್ರಾಮದ ಯಜಮಾನರು ಮತ್ತು ಮುಖಂಡರು ಹಾಗೂ ಯುವಕ ಮಿತ್ರರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೂಡ ಭಾಗವಹಿಸಿದ್ದರು

### ಅದ್ದೂರಿ ಶೋಭಾಯಾತ್ರೆ

ಗಣಪತಿ ಮೂರ್ತಿಯ ಶೋಭಾಯಾತ್ರೆಯ ವೇಳೆ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ತಮಟೆ ಮೇಳ ಹಾಗೂ ಸಾಂಪ್ರದಾಯಿಕ ವಾದ್ಯಮೇಳಗಳ ನಾದದೊಂದಿಗೆ ಸಾವಿರಾರು ಯುವಕರು ಮತ್ತು ಭಕ್ತರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿದ ವೇಳೆ ಕವಣಾಪುರ ಬಸಪ್ಪ. ಅಂಗರಹಳ್ಳಿ ಬಸಪ್ಪ ಮತ್ತು ಅಂಜನಾಪುರದ ಬಸಪ್ಪ ದರ್ಶನ ಪ್ರಾಪ್ತಿಯಾಯಿತು. ಅಂಜನಾಪುರ ಗ್ರಾಮದ ಮೊಗೆಕರೆಯಲ್ಲಿ ಗಣಪತಿ ಮೂರ್ತಿಯ ವಿಸರ್ಜನೆ ನಡೆಯಿತು.

### ಇಡ್ಲಿ ಮೇಳ!

ಅಂಜನಾಪುರ ಗ್ರಾಮ ಮಾತ್ರವಲ್ಲದೆ ಅಕ್ಕ ಪಕ್ಕದ ಗ್ರಾಮಗಳಾದ ವಿಭೂತಿಕೆರೆ. ಚಿಕ್ಕೇನಹಳ್ಳಿ. ಚನ್ನಮಾನಹಳ್ಳಿ. ದೇವರದೊಡ್ಡಿ. ಅಲೆಮರದ ದೊಡ್ಡಿ ಗ್ರಾಮದ ನಾಗರೀಕರು ಸಹ ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದರು. ಅಂಜನಾಪುರದ ಹಿಂದು ಮಹಾಗಣಪತಿ ಸೇವಾ ಸಮಿತಿಯವರು ಇಡ್ಲಿ ಮೇಳವನ್ನು ಆಯೋಜಿಸಿದ್ದು ವಿಶೇಷವಾಗಿತ್ತು. ಜೊತೆಗೆ ಮೆಂತ್ಯೆ ಬಾತು ಪ್ರಸಾದವಾಗಿ ವಿತರಣೆಯಾಯಿತು.

# ಮಕ್ಕಳ ದಸರಾ ಸಂಭ್ರಮಕ್ಕೆ ಸಜ್ಜಾದ ಸ್ವಾಮಿ ವಿವೇಕಾನಂದ ಚಾರಿಟಬಲ್

ಗುಂಡ್ಲುಪೇಟೆ: ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರ ಸೃಜನಶೀಲತೆ ಹಾಗೂ ಕೌಶಲ್ಯವನ್ನು ಬೆಳೆಸುವ ಉದ್ದೇಶದಿಂದ ಸ್ವಾಮಿ ವಿವೇಕಾನಂದ ಚಾರಿಟಬಲ್ ಟ್ರಸ್ಟ್ (ರಿ), ಗುಂಡ್ಲುಪೇಟೆ ವತಿಯಿಂದ 'ಮಕ್ಕಳ ದಸರಾ ಸಂಭ್ರಮ?2026' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಅಕ್ಟೋಬರ್ 5ರಿಂದ ಹತ್ತು ದಿನಗಳ ಕಾಲ ನಡೆಯಲಿರುವ ಮಕ್ಕಳ ಶಿಬಿರದಲ್ಲಿ ಚಿತ್ರಕಲೆ, ಗಾಯನ, ಸಾಹಿತ್ಯ, ಕಥೆ ಹೇಳುವಿಕೆ ಸೇರಿದಂತೆ ವಿವಿಧ ಆಟೋಟ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಹಾಗೂ ಹೊಸ ಕೌಶಲ್ಯಗಳನ್ನು ಕಲಿಯಲು ಶಿಬಿರವು ಉತ್ತಮ ವೇದಿಕೆಯಾಗಲಿದೆ.

ಆಸಕ್ತ ಮಕ್ಕಳು ಗುಂಡ್ಲುಪೇಟೆ ಪಟ್ಟಣದ ಮದಕರಿನಾಯಕ ರಸ್ತೆಯಲ್ಲಿರುವ ಎಂ.ಎಸ್. ಕಮ್ಯೂನಿಕೇಷನ್ ಕಚೇರಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳುವಂತೆ ಟ್ರಸ್ಟ್ ಅಧ್ಯಕ್ಷ ಟಿ.ಎಸ್. ರಾಜೇಂದ್ರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ:
ಮಹದೇವಸ್ವಾಮಿ: 9902162119
ರಾಜೇಶ್: 8095233618

# 51 ಹಾಲು ಉತ್ಪಾದಕ ಕುಟುಂಬಗಳಿಗೆ ಪರಿಹಾರ

**ಗುಂಡ್ಲುಪೇಟೆ:** ಚಾಮರಾಜನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟ (ಚಾಮುಲ್) ಹಾಗೂ ಚಾಮುಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಮೃತಪಟ್ಟ ಹಾಲು ಉತ್ಪಾದಕ ಸದಸ್ಯರ ವಾರಸುದಾರರಿಗೆ ಮರಣ ಪರಿಹಾರ ವಿತರಿಸಲಾಯಿತು.

ಒಟ್ಟು 51 ಫಲಾನುಭವಿಗಳಿಗೆ ?9.25 ಲಕ್ಷ ಪರಿಹಾರ ನೀಡಲಾಗಿದ್ದು, 19 ಫಲಾನುಭವಿಗಳಿಗೆ ತಲಾ ?15 ಸಾವಿರದಂತೆ 2.85 ಲಕ್ಷ ಹಾಗೂ 32 ಫಲಾನುಭವಿಗಳಿಗೆ ತಲಾ 20 ಸಾವಿರದಂತೆ ?6.40 ಲಕ್ಷ ಮೊತ್ತದ ಚೆಕ್‌ಗಳನ್ನು ವಿತರಿಸಲಾಯಿತು. ಚಾಮರಾಜನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷ ಹಾಗೂ ಚಾಮುಲ್ ನಿರ್ದೇ ಶಕ ಎಚ್.ಎಸ್. ನಂಜುಂಡ ಪ್ರಸಾದ್ ಮತ್ತು ಎಂಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹಾಗೂ ಚಾಮುಲ್ ನಿರ್ದೇಶಕ ಎಂ.ಪಿ. ಸುನಿಲ್ ಅವರು ಫಲಾನುಭವಿಗಳಿಗೆ ಚೆಕ್ ವಿತರಿಸಿದರು.

ಮಾತನಾಡಿದ ಎಚ್.ಎಸ್. ನಂಜುಂಡ ಪ್ರಸಾದ್, ಮೃತಪಟ್ಟ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ವಾರಸುದಾರರಿಗೆ ಒಕ್ಕೂಟದಿಂದ ಪರಿಹಾರ ನೀಡಲಾಗುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು. 58 ವರ್ಷದೊಳಗಿನ ಸದಸ್ಯರಿಗೆ ?1 ಲಕ್ಷದವರೆಗೆ ವಿಮಾ ಸೌಲಭ್ಯವಿದ್ದು, ರಾಸುಗಳ ತುರ್ತು ಚಿಕಿತ್ಸೆಗೆ ಪ್ರತ್ಯೇಕ ವ್ಯವಸ್ಥೆಯೂ ಇದೆ. ಹಾಲು ಉತ್ಪಾದಕರಿಗೆ ಒಕ್ಕೂಟದ ಮೂಲಕ ದೊರೆಯುವ ಈ ಸೌಲಭ್ಯಗಳು ಖಾಸಗಿ ಡೈರಿಗಳಲ್ಲಿ ಲಭ್ಯವಿಲ್ಲ ಎಂದರು.



ನಿರ್ದೇಶಕ ಎಂ.ಪಿ. ಸುನಿಲ್ ಮಾತನಾಡಿ, ಸಹಕಾರ ಸಂಸ್ಥೆಗಳು ಸದಸ್ಯರ ಸಂಸ್ಥೆಗಳಾಗಿದ್ದು, ಇಲ್ಲಿ ದೊರೆಯುವ ಸೌಲಭ್ಯಗಳನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು. ಖಾಸಗಿ ಡೈರಿಗಳ ಆಮಿಷಕ್ಕೆ ಒಳಗಾಗದೆ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವಂತೆ ಮನವಿ ಮಾಡಿದರು. ಸಂಘದ ಮೂಲಕ ರಾಸುಗಳಿಗೆ ಎರಡು ವರ್ಷಗಳ ಅವಧಿಯ ವಿಮಾ ಸೌಲಭ್ಯವಿದ್ದು, ರೈತರು ಇದರ ಪ್ರಯೋಜನ ಪಡೆಯಬೇಕು ಎಂದರು. ಈ ಸಂದರ್ಭದಲ್ಲಿ ವಿಸ್ತರಣಾಧಿಕಾರಿಗಳಾದ ಎಚ್. ಪ್ರಕಾಶ್, ಸಿದ್ದಲಿಂಗೇಶ್, ರಂಜಿತಾ, ಡಾ. ಮಂಜುನಾಥ್, ಮುದ್ದಪ್ಪ, ಉದಯ್, ಮಂಜೇಶ್, ನೌಕರ ಸಂಘದ ಪದಾಧಿಕಾರಿಗಳಾದ ನಾಗೇಶ್ ಹಕ್ಕಲಪುರ, ಮಹೇಂದ್ರ ಅಗತಗೌಡನಹಳ್ಳಿ, ನಂಜಪ್ಪ ಮಡಹಳ್ಳಿ, ತಾಲೂಕಿನ ಕಾರ್ಯದರ್ಶಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

## ಕರಿದ ಆಹಾರ ಪದಾರ್ಥಗಳ ಸೇವನೆಯಲ್ಲಿ ಮಿತಿ ಇರಲಿ – ದೊಡ್ಡಾಲಹಳ್ಳಿ ಪುಟ್ಟಸ್ವಾಮಿಗೌಡ

# ನಂಜಾಪುರದಲ್ಲಿ ವಿಶ್ವ ಹೃದಯ ದಿನಾಚರಣೆ

ರಾಮನಗರ: ಮಾಂಸಾಹಾರ ಕಡಿಮೆ ಮಾಡಿ, ಸೊಪ್ಪು, ತರಕಾರಿ ಬಳಸಿ ಮಾಡಿದ ಆಹಾರವನ್ನು ಹೆಚ್ಚು ಸೇವಿಸಿ. ಜೀವನದಲ್ಲಿ ತಾಳ್ಮೆಯನ್ನು ರೂಢಿಸಿಕೊಳ್ಳಿ ಹರಿ (ಆತುರ), ವರಿ (ಚಿಂತಾಕ್ರಾಂತ) ಮತ್ತು ಕರಿ (ಎಣ್ಣೆಯಲ್ಲಿ ಕರಿದ ಆಹಾರ) ಹೃದಯದ ಆರೋಗ್ಯಕ್ಕೆ ಸಮಸ್ಯೆಗಳನ್ನು ತಂದೊಡ್ಡುತ್ತವೆ ಎಂದು ದೊಡ್ಡಾಲಹಳ್ಳಿ ಪುಟ್ಟಸ್ವಾಮಿಗೌಡ ಎಚ್ಚರಿಸಿದರು.

ವಿಶ್ವ ಹೃದಯ ದಿನಾಚರಣೆ ಅಂಗವಾಗಿ ತಾಲೂಕಿನ ನಂಜಾಪುರ ಆರೋಗ್ಯ ಕೇಂದ್ರದ ಆವರಣದಲ್ಲಿ ಸಾರ್ವಜನಿಕರಿಗೆ ಏರ್ಪಡಿಸಿದ್ದ ಹೃದಯಾರೋಗ್ಯ ಕುರಿತ ಮಾಹಿತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ಕೆಲಸಕ್ಕೆ ಪೂರ್ವ ಸಿದ್ಧತೆ ಮುಖ್ಯ. ಆತುರವಾಗಿ ಯಾವ ಕೆಲಸವೂ ಸಮರ್ಪಕವಾಗಿರುವುದಿಲ್ಲ. ಆತುರದಿಂದ ಮಾಡುವುದು ತೀವ್ರ ಆಲೋಚನೆಗೆ ಗುರಿ ಮಾಡುತ್ತದೆ. ಇದು ಮಾನಸಿಕವಾಗಿ ಮತ್ತು ಹೃದಯದ ಮೇಲೂ ಪರಿಣಾಮ ಬಿರುತ್ತದೆ ಎಂದರು.



ನಮ್ಮ ಮನಸ್ಸು ಮತ್ತು ದೇಹದ ಆರೋಗ್ಯ ನಮ್ಮ ಆಹಾರ ಪದ್ಧತಿಯನ್ನು ಅವಲಂಭಿಸಿದೆ. ಎಣ್ಣೆಯಲ್ಲಿ ಕರಿದ ಆಹಾರ ಪದಾರ್ಥಗಳನ್ನು ಆದಷ್ಟು ಕಡಿಮೆ ಬಳಸಿ. ಕಾರಣ ಎಣ್ಣೆಯಲ್ಲಿನ ಜಿಡ್ಡು ನಮ್ಮ ರಕ್ತನಾಳಗಳಲ್ಲಿ ಶೇಖರಣೆಯಾಗಿ ರಕ್ತ ಚಲನೆಗೆ ಸಮಸ್ಯೆಯುಂಟು ಮಾಡುತ್ತವೆ. ಹೀಗಾಗಿ ಕರಿದ ಪದಾರ್ಥಗಳನ್ನು ಕಡಿಮೆ ಸೇವಿಸಿ ಎಂದು ತಿಳುವಳಿಕೆ ಮೂಡಿಸಿದರು.

ತಾಜಾ ಹಣ್ಣು, ಸೊಪ್ಪು ಮತ್ತು ತರಕಾರಿಗಳನ್ನು ಬಳಸುವುದರಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಒಟ್ಟಾರೆ ನಮ್ಮ ದಿನನಿತ್ಯದ ಜೀವನ ನಮ್ಮ ಹೃದಯದ ಮೇಲೆ ಹೊರೆಯಾಗಬಾರದು ಎಂದರು.

ಈಗಾಗಲೇ ರಕ್ತದ ಒತ್ತಡ ಇರುವವರು ವೈದ್ಯರ ಸಲಹೆಯನ್ನು ಪಡೆಯಬೇಕು. ವೈದ್ಯರ ಸಲಹೆಯಂತೆ ಔಷಧಗಳನ್ನು ತೆಗೆದುಕೊಳ್ಳಬೇಕು. ಅವರ ಸಲಹೆ ಇಲ್ಲದೆ ಔಷಧಗಳನ್ನು ನಿಲ್ಲಿಸಬಾರದು ಎಂದರು. ತೀವ್ರವಾದ ಹೃದಯ ಸಮಸ್ಯೆ ಇರುವವರು ಹೃದಯ ರೋಗ ತಜ್ಞರ ಸಲಹೆಯ ಮೇರೆಗೆ ಚಿಕಿತ್ಸಾ ಕ್ರಮಗಳನ್ನು ಮುಂದುವರಿಸಬೇಕು. ಐವತ್ತು ವರ್ಷ ದಾಟಿದ ಎಲ್ಲರು ಅತಿಯಾದ ಭಾರವನ್ನು ಎತ್ತಬಾರದು ಎಂದರು.

ಧೂಮಪಾನ, ತಂಬಾಕು ಸೇವನೆ, ಮದ್ಯಪಾನದಿಂದ ಯುವಕರು ಸೇರಿದಂತೆ ಎಲ್ಲರು ದೂರ ಕಾಯ್ದುಕೊಳ್ಳಬೇಕು. ಬೆಳಿಗ್ಗೆ ಅಥವಾ ಸಂಜೆ ಕನಿಷ್ಠ ಪಕ್ಷ ನಲವತ್ತು ನಿಮಿಷಗಳ ಕಾಲ ವಯಸ್ಸಿಗೆ ಅನುಗುಣವಾಗಿ ವಾಕಿಂಗ್ ಮಾಡಬೇಕು. ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ. ಜಿಲಾನ್ ಪಾಷಾ , ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ,ಎನ್ ರಾಜೇಂದ್ರ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಎಂ,ಎಸ್ ತೇಜಸ್ವಿನಿ, ಆಶಾ ಕಾರ್ಯಕರ್ತೆ ಯರಾದ ರಾಜಮ್ಮ ,ಪ್ರಮಿಳಾ, ರತ್ನಮ್ಮ ಮುಂತಾದವರು ಹಾಜರಿದ್ದರು.

# ಸಿಎಂ ಭೇಟಿ ಮಾಡಿಸುವ ಸಚಿವರ ಭರವಸೆ

ಚಾಮರಾಜನಗರ : ನಮ್ಮ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರೈತರ ಪರ ಕಾಳಜಿ ಹೊಂದಿದ್ದಾರೆ. ಕೊಳ್ಳೇಗಾಲದಲ್ಲಿ ನಡೆಯುವ ವೇದಿಕೆ ಸಮಾರಂಭದಲ್ಲಿ ಮುಖ್ಯಮಂತ್ರಿ ಭೇಟಿ ಮಾಡಿಸಿ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅವಕಾಶ ಮಾಡಿಕೊಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರ ಭರವಸೆಗೆ ರೈತರು ಪಾದಯಾತ್ರೆ ಕೈ ಬಿಟ್ಟರು.

ರೈತರ ಸಾಲಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಅಹೋರಾತ್ರಿ ಧರಣಿ ನಡೆಸಿ. ಇಂದು ಬೆಳಿಗ್ಗೆ ನಗರದ ಜಿಲ್ಲಾಡಳಿತ ಭವನದಿಂದ ಕೊಳ್ಳೇಗಾಲಕ್ಕೆ ಮುಖ್ಯಮಂತ್ರಿ ಭೇಟಿಗಾಗಿ ಪಾದಯಾತ್ರೆ ಕೈಗೊಂಡು ಸಂತೇಮರಹಳ್ಳಿ ಪ್ರವೇಶಿತು. ಅಲ್ಲಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಶ್ರೀರೂಪ, ಜಿ.ಪಂ. ಸಿಇಓ ಮೋನಾರೋತ್, ಎಸ್ಪಿ ಮುತ್ತುರಾಜು ಭೇಟಿ ನೀಡಿ ರೈತರ ಸಮಸ್ಯೆ ಆಲಿಸಿ, ನಾಳೆ ಕೊಳ್ಳೇಗಾಲದ ಎಂಜಿಎಸ್‌ವಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ನಡೆಯುವ ಕೊಳ್ಳೇಗಾಲ ಮತ್ತು ಹನೂರು ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಡನೆ ಭೇಟಿ



ಮಾಡಿಸಿ ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದರು.

ಜಿಲ್ಲಾಧಿಕಾರಿಗಳು, ತಹಸೀಲ್ದಾರ್ ಅವರ ಬಳಿ ಅ

ನುದಾನವಿದ್ದು, ಮೇವು, ಮೇವಿನ ಬೀಜ.ವಿತರಣೆ ಮಾಡಲಾಗುತ್ತಿದೆ. ಕಾಲಕಾಲಕ್ಕೆ ಮೃತಪಟ್ಟ ಜಾನುವಾರುಗಳಿಗೆ ಪರಿಹಾರ ನೀಡಲಾಗುತ್ತಿದೆ. ಅರಣ್ಯ ಇಲಾಖೆಯಲ್ಲಿ ಸತ್ತರೆ ಇಲಾಖೆಯವರು ಪರಿಹಾರ ಕೊಡುತ್ತಾರೆ. ರಾಜ್ಯದಲ್ಲಿ ಬರ ಅಧ್ಯಯನ ಮಾಡಿ 3760 ಕೋಟಿ ಅನುದಾನ ಕೊಡುವಂತೆ ಕೇಂದ್ರಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ನಾಳೆ, ನಾಳಿದ್ದು ಕೇಂದ್ರ ಬರ ಅಧ್ಯಯನ ತಂಡ ಬರಲಿದೆ. ಕುಡಿಯುವ ನೀರಿಗೆ ಸಾಕಾಗುವಷ್ಟು ಅನುದಾನ ಕೊಟ್ಟಿದ್ದೇವೆ. ಒಂದು ತಿಂಗಳಿನಲ್ಲಿ ಹನೂರು ಭಾಗದಲ್ಲಿ140 ಬೋರ್‌ವೆಲ್ ಕೊರೆಸಲಾಗಿದೆ. ಕೆಲವು ಕಡೆ ಮೋಟಾರ್ ಅಳವಡಿಸಲಾಗಿದ್ದು, ಕೆಲವು. ಕಡೆ ಮೋಟಾರ್ ಅಳವಡಿಸಲಾಗುತ್ತಿದೆ. ಸುಮಾರು ಬೋರ್‌ಗಳಲ್ಲಿ ನೀರು ಬಂದಿಲ್ಲ. 48 ವಾಟರ್ ಟ್ಯಾಂಕ್‌ಗಳ ಮೂಲಕ ನೀರು ಕೊಡಲಾಗುತ್ತಿದೆ' ಎಂದರು. ಕರ್ನಾಟಕ ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಎ.ಎಂ. ಮಹೇಶ್ ಪ್ರಭು, ಖಾಯಂ ಆಹ್ವಾನಿತ ಹೆಗ್ಗವಾಡಿಪುರ ಮಹೇಶ್‌ಕುಮಾರ್, ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ, ತಾಲೂಕು ಅಧ್ಯಕ್ಷ ಮಲ್ಲಣ್ಣ, ಜ್ಯೋತಿಗೌಡನಪುರ ಸಿದ್ದರಾಜು ಹಾಗೂ ಪದಾಧಿ ಕಾರಿಗಳು ಭಾಗವಹಿಸಿದ್ದರು.

# ಸುಜ್ಞಾನ ನಿಧಿ ಶಿಷ್ಯಾ ವೇತನ ವಿತರಣೆ



ಮೈಸೂರು: ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಸ್ವಸ್ಥ ಸಮಾಜ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾದ ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯಾ ವೇತನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಿಲಾಗಿದೆ.

ಮಾನವ ಸಂಪನ್ಮೂಲ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಯೋಜನೆಯ ಪಾಲುದಾರ ಕುಟುಂಬಗಳ ಮಕ್ಕಳಿಗೆ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣಕ್ಕೆ ಅನುಕೂಲವಾಗುವಂತೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬೆಳ್ಳಿ ಹಬ್ಬದ ಪ್ರಯುಕ್ತ ಅಂಗವಾಗಿ ಮೈಸೂರು ಯೋಜನಾ ಕಛೇರಿಯಿಂದ 83 ವಿದ್ಯಾರ್ಥಿಗಳಿಗೆ 8,86,600ರೂ. ಶಿಷ್ಯವೇತನವನ್ನು ನೀಡಲಾಗುತ್ತಿದೆ. ಗ್ರಾಮಾಭಿವೃದ್ಧಿ ಯೋಜನೆ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ನಿರ್ವಹಿಸುತ್ತಿರುವ ಜವಾಬ್ದಾರಿಯಾಗಿದೆ ಎಂದು ಮಾನವ ಸಂಪನ್ಮೂಲ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಶಿವಕುಮಾರ್‌ರವರು ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಯೋಜನಾಧಿಕಾರಿ ಎಂ.ಗಣೇಶ್, ಕ್ಷೇತ್ರ ಯೋಜನಾಧಿಕಾರಿ ಪಿ.ಶಶಿರೇಖಾ ಇನ್ನಿತರರು ಉಪಸ್ಥಿತರಿದ್ದರು.

# ಮೂಲಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ

## ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಕಲ್ಪಿಸುವಂತೆ ಒತ್ತಾಯ

**ಗುಂಡ್ಲುಪೇಟೆ:** ತಾಲೂಕಿನ ಬೇರಂಬಾಡಿ ಗ್ರಾಮದಲ್ಲಿ ಕುಡಿಯುವ ನೀರು ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಗ್ರಾಮ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಗ್ರಾಮದಲ್ಲಿ ಹಲವು ಮೂಲಭೂತ ಸಮಸ್ಯೆಗಳಿದ್ದರೂ ಅವುಗಳನ್ನು ಪರಿಹರಿಸುವಲ್ಲಿ ಗ್ರಾಮ ಪಂಚಾಯಿತಿ ಆಡಳಿತ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಆರೋಪಿಸಿದ ರೈತರು ಹಾಗೂ ಗ್ರಾಮಸ್ಥರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಗ್ರಾಮ ಪಂಚಾಯಿತಿ ಪಿಡಿಒ, ಬಹುಗ್ರಾಮ ಕುಡಿಯುವ ನೀರು ಯೋಜನೆ ಹಾಗೂ ತಾಲೂಕು ಪಂಚಾಯಿತಿ ಅಧಿಕಾರಿಗಳು ಆಗಮಿಸಿ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದರು. ವಿವಿಧ ಸಮಸ್ಯೆಗಳ ಕುರಿತು ಲಿಖಿತ ಮನವಿಯನ್ನು ಅಧಿಕಾರಿಗಳಿಗೆ ಸಲ್ಲಿಸಲಾಯಿತು. ಸಮಸ್ಯೆಗಳನ್ನು ಶೀಘ್ರ ಬಗೆಹರಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಡಲಾಯಿತು.

ಈ ಸಂದರ್ಭದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆ ಅಧಿಕಾರಿಗಳಾದ ಅನುಪ್ರಸಾದ್, ಮಹದೇವಪ್ರಸಾದ್, ರಿತೇಶ್, ಲಾವಣ್ಯ, ಪ್ರಸನ್ನಕುಮಾರ್, ರೈತ ಮುಖಂಡರಾದ ದೇವರಹಳ್ಳಿ ಸಿದ್ದಪ್ಪ, ಪಾಲಾಕ್ಷ ಕುಂದುಕೆರೆ, ಮಹೇಶ್, ಕೊತ್ತಲವಾಡಿ ಮಂಜು, ಮನು, ಹೊನ್ನೇಗೌಡನಹಳ್ಳಿ ಸಿದ್ದಪ್ಪ, ಭೀಮನಬೀಡು ರಾಜ್, ರಾಚಶೆಟ್ಟಿ, ಪ್ರವೀಣ್ ಬೇರಂಬಾಡಿ, ಶಶಿ ಸೇರಿದಂತೆ ರೈತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು



# ಯುಜಿ ಕೇಬಲ್ ಕಾಮಗಾರಿ ಮುಗಿಸಿ

## ದಸರಾ ಹಿನ್ನೆಲೆ ಪುನಶ್ಚೇತನಕ್ಕೆ ಗಡುವು-ಹೊಸ ಕಾಮಗಾರಿಗೆ ತಡೆ



**ಅ.5ರೊಳಗೆ ಮುಗಿಸಲು ಏಜೆನ್ಸಿಗಳಿಗೆ ರಮೇಶ್ ಬಂಡಿಸಿದ್ದೇಗೌಡ ಕಟ್ಟುನಿಟ್ಟಿನ ಸೂಚನೆ**

**ಮೈಸೂರು:** ನಿಮ್ಮ ಚಾಲ್ತಿಯಲ್ಲಿರುವ ಭೂಗತ ವಿದ್ಯುತ್ ಕೇಬಲ್ (ಯುಜಿ ಕೇಬಲ್) ಅಳವಡಿಕೆ ಕಾಮಗಾರಿಯನ್ನು ಅಕ್ಟೋಬರ್ 5 ರೊಳಗೆ ಪೂರ್ಣಗೊಳಿಸುವಂತೆ ಶಾಸಕರೂ ಆಗಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಸೆಸ್ಕ್) ಅಧ್ಯಕ್ಷರಾದ ರಮೇಶ್ ಬಂಡಿಸಿದ್ದೇಗೌಡ ಅವರು ಏಜೆನ್ಸಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸೆಸ್ಕ್ ಕಛೇರಿಯಲ್ಲಿ ಮಂಗಳವಾರ ಯುಜಿ ಕೇಬಲ್ ಕಾಮಗಾರಿಯ ಪ್ರಗತಿ ಕುರಿತು ಸಂಬಂಧಪಟ್ಟ ಏಜೆನ್ಸಿಗಳು ಹಾಗೂ ಅಧಿಕಾರಿಗಳೊಂದಿಗೆ ನಡೆದ ಸಭೆ ಅಧ್ಯಕ್ಷತೆ ವಹಿಸಿದ್ದರು. ಈಗಾಗಲೇ ನಡೆಯುತ್ತಿರುವ ಯುಜಿ ಕೇಬಲ್ ಕಾಮಗಾರಿಗಳನ್ನು ನಿಗದಿತ ಗಡುವಿನೊಳಗೆ ಪೂರ್ಣಗೊಳಿಸುವ ಜೊತೆಗೆ, ಕಾಮಗಾರಿ ನಡೆದಿರುವ ಸ್ಥಳಗಳ ಪುನಶ್ಚೇತನ ಕಾರ್ಯವನ್ನು ಶೇ. 100ರಷ್ಟು ಪೂರ್ಣಗೊಳ್ಳಬೇಕು ಹಾಗೂ ಅಕ್ಟೋಬರ್ 5ರೊಳಗೆ ಈ ಪುನಶ್ಚೇತನ ಕಾಮಗಾರಿಗಳನ್ನು ಮುಗಿಸಬೇಕು ಎಂದು ಸೂಚಿಸಿದರು. ದಸರಾ ಹೊಸದಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಸೂಚಿಸಿದ ಅವರು, ಕಾಮಗಾರಿ ಮುಗಿಸುವ ವಿಚಾರದಲ್ಲಿ ರಾಜಿಗೆ ಅವಕಾಶವಿಲ್ಲ, ಗಡುವಿನೊಳಗೆ ಯಾವುದೇ ಕಾಮಗಾರಿ ಪೂರ್ಣಗೊಳಿಸದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು ಎಚ್ಚರಿಕೆ ನೀಡಲಾಗಿದೆ. ಈ ಮಹತ್ವದ ಸಭೆಯಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಎಲ್. ಲೋಕೇಶ್, ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಸುನೀಲ್ ಕುಮಾರ್ ಸೇರಿದಂತೆ ಇತರ ಪ್ರಮುಖ ಅಧಿಕಾರಿಗಳು ಮತ್ತು ಏಜೆನ್ಸಿಗಳ ಪ್ರತಿನಿಧಿಗಳು ಸೇರಿವೆ.

### ಗುಂಡಿ ಮುಚ್ಚುವುದು, ಡೆಬ್ರಿಸ್ ತೆರವು, ಇಲಾಖೆಗಳ ಸಮನ್ವಯ

ಯುಜಿ ಕೇಬಲ್ ಅಳವಡಿಕೆ ಕಾಮಗಾರಿಗಾಗಿ ರಸ್ತೆ ಹಾಗೂ ಚಾರಿ ಮಾರ್ಗಗಳಲ್ಲಿ ಗುಂಡಿಗಳನ್ನು ತೆಗೆದು ಪಾದ ಬಿಡುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಗುಂಡಿ ತೆಗೆದು ಬಿಟ್ಟಿರುವ ಎಲ್ಲ ಸ್ಥಳಗಳನ್ನು ಗುರುತಿಸಿ ತಕ್ಷಣ ಸಮರ್ಪಕವಾಗಿ ಮುಚ್ಚಬೇಕು ಎಂದು ಆದೇಶಿಸಿದರು. ಗುಂಡಿಗಳನ್ನು ಮುಚ್ಚಿದ ಬಳಿಕ ಕಾಮಗಾರಿಯಿಂದ ಉಂಟಾಗಿರುವ ಡೆಬ್ರಿಸ್ಗಳನ್ನು ಸಮರ್ಪಕವಾಗಿ ಸಮರ್ಪಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ಕಡ್ಡಾಯವಾಗಿ ಬ್ಯಾರಿಕೇಡ್ ಹಾಗೂ ಸೂಚನಾ ಫಲಕಗಳನ್ನು ಅಳವಡಿಸಬೇಕು. ವೈಟ್ ಟ್ಯಾಪಿಂಗ್, ಯುಜಿಡಿ ಮತ್ತು ಯುಜಿಡಿ ಕೇಬಲ್ ಅಳವಡಿಕೆ ಕಾಮಗಾರಿಗಳು ಏಕಕಾಲದಲ್ಲಿ ನಡೆಯುತ್ತಿವೆ, ಈ ಕಾಮಗಾರಿಗಳ ನಡುವೆ ಸಮನ್ವಯದ ಕೊರತೆಯಾದರೆ ಸಾರ್ವಜನಿಕರಿಗೆ ತೊಂದರೆಯಾಗಲಿದೆ. ಆದ್ದರಿಂದ ಅಧಿಕಾರಿಗಳು ಮತ್ತು ಏಜೆನ್ಸಿಗಳು ಪರಸ್ಪರ ಸಮನ್ವಯದಿಂದ ಕಾಮಗಾರಿ ನಡೆಸಬೇಕು ಎಂದು ಅವರು ಕಿವಿಮಾತು ಹೇಳಿದರು.

### ಮೆಟೀರಿಯಲ್ ತೆರವು

ದಸರಾ ಸಂದರ್ಭದಲ್ಲಿ ನಗರದ ಪಾದಚಾರಿ ಮಾರ್ಗಗಳು ವಿವಿಧೆಡೆ ಇರಿಸಿರುವ ಯುಜಿ ಕೇಬಲ್ ಮತ್ತು ಸೆಸ್ಕ್ಗೆ ಸಂಬಂಧಿಸಿದ ಎಲ್ಲವು ಮೆಟೀರಿಯಲ್ಗಳನ್ನು ಕೂಡಲೇ ಮಾಡಬೇಕು. ನಗರದ ಸೌಂದರ್ಯ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಎಚ್ಚರ ವಹಿಸಬೇಕು. ಯುಜಿ ಕೇಬಲ್ ಕಾಮಗಾರಿಗೆ ಅಕ್ಟೋಬರ್ 6ರಂದು ಮತ್ತೊಮ್ಮೆ ಸಭೆ ನಡೆಸಿ ಪರಿಶೀಲನೆ. ಈ ಎಲ್ಲಾ ಏಜೆನ್ಸಿಗಳ ಮುಖ್ಯಸ್ಥರು ಕಡ್ಡಾಯವಾಗಿ ಹಾಜರಾಗಬೇಕು ಎಂದು ಸೂಚಿಸಿದ ಅವರು, ಸದರಿ ಸಭೆಯ ವೇಳೆಗೆ ಕಾಮಗಾರಿಗಳು ಮುಗಿಯದಿದ್ದರೆ ಮುಂದಿನ ಕಠಿಣ ಕ್ರಮಗಳನ್ನು ವಹಿಸಲಾಗಿದೆ ಎಂದು ಸೂಚಿಸಿದರು.


ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ,

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ,

ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ : 08225-272128 :08225-272123,

Email: sec.mmtemple@gmail.com

ನಂ.ಶ್ರೀ ಮ.ಮ.ಕ್ಷೇ.ಅ.ಪ್ರಾ/ಬಸ್/18/2026-27 ದಿನಾಂಕ: 19.09.2026

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

| ಕ್ರ. ಸಂ. | ಟೆಂಡರ್ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ ರೂ.ಗಳಲ್ಲಿ |
|---|---|---|---|
| 1. | ಬಸ್‌ಗಳಿಗೆ (Bs3) & ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ (Bs6) ವಾಹನಗಳಿಗೆ ಅವಶ್ಯಕತೆ ಅನುಗುಣವಾಗಿ ದುರಸ್ಥಿ ಕೆಲಸಕ್ಕೆ ಬೇಕಾದ ಬಿಡಿಭಾಗಗಳ ಸಾಮಾಗ್ರಿಗಳನ್ನು ಖರೀದಿ ಮಾಡಲು ದರ ಎಲ್ಲಾ ತೆರಿಗೆಗಳು ಮತ್ತು ಸಾಗಾಣಿಕೆ ವೆಚ್ಚ ಸೇರಿ 1 ವರ್ಷ ಅವಧಿ ಸರಬರಾಜು ಮಾಡುವ ಬಗ್ಗೆ. | 40.ಲಕ್ಷ | 40. ಸಾವಿರ |

ವಿವರಗಳನ್ನು https//kppp.karnataka.gov.in ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ದಿನಾಂಕ:06-10-2026 ರ ಸಂಜೆ 5.00 ಗಂಟೆಯ ಒಳಗಾಗಿ ಪ್ರಾಧಿಕಾರದ ವಿಷಯ ನಿರ್ವಾಹಕರ ಮೊಬೈಲ್ ಸಂಖ್ಯೆ 8762128459 ನ್ನು ಸಂಪರ್ಕಿಸಬಹುದು.

ಇ-ಪ್ರಕ್ಯೂಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1. ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 21-09-2026 ರ ನಂತರ
2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ ದಿನಾಂಕ: 06-10-2026 ಸಂಜೆ 4.00 ಗಂಟೆವರೆಗೆ
3. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ ದಿನಾಂಕ: 07-10-2026 ಸಂಜೆ 5.00 ಗಂಟೆಯ ನಂತರ

ಸಹಿ/-ಕಾರ್ಯದರ್ಶಿ,

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ. ಮಹದೇಶ್ವರಬೆಟ್ಟ

ಸಂ:ವಾಸಾಸಂಇ:ಚಾನಗರ: 384 : 2026-27


# ಭಗತ್ ಸಿಂಗ್ ಜಯಂತಿ, ತಿರಂಗ ಯಾತ್ರೆ



ಗುಂಡ್ಲುಪೇಟೆ, :- ತಾಲೂಕಿನ ತೆರಕಣಾಂಬಿಯಲ್ಲಿ ದೇಶಪ್ರೇಮಿ ಭಗತ್ ಸಿಂಗ್ ಸೇವಾ ಟ್ರಸ್ಟ್ ಹಾಗೂ ಯುವ ಬ್ರಿಗೇಡ್ ವತಿಯಿಂದ ಭಗತ್ ಸಿಂಗ್ ಜಯಂತಿ ಹಾಗೂ 'ವಿಜಯಿಭವ' ತಿರಂಗ ಯಾತ್ರೆಯನ್ನು ದೇಶಭಕ್ತಿ ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಗಿಲ್‌ನಿಂದ ತರಲಾದ ರಾಷ್ಟ್ರಧ್ವಜಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಯಾತ್ರೆಗೆ ಚಾಲನೆ ನೀಡಲಾಯಿತು. ಬಳಿಕ 150 ಅಡಿ ಉದ್ದದ ರಾಷ್ಟ್ರಧ್ವಜವನ್ನು ಹಿಡಿದು ನೂರಾರು ದೇಶಭಕ್ತರು ತೆರಕಣಾಂಬಿಯ ಪ್ರಮುಖ ರಸ್ತೆಯಲ್ಲಿ ಹೆಜ್ಜೆ ಹಾಕಿದರು.

ಯಾತ್ರೆಯುದ್ದಕ್ಕೂ ಭಗತ್ ಸಿಂಗ್ ಹಾಗೂ ಭಾರತ ಮಾತೆಗೆ ಜಯಕಾರ ಮೊಳಗಿತು. ಸ್ಥಳೀಯರೊಂದಿಗೆ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ್ದ ಯುವಕರು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಯಾತ್ರೆಯ ಸಮಾರೋಪದಲ್ಲಿ ಯುವ ಬ್ರಿಗೇಡ್‌ನ ಪ್ರಮುಖರಾದ ನಂಜನಗೂಡು ಚಂದ್ರಶೇಖರ್ ಅವರು ತಿರಂಗ ಯಾತ್ರೆಯ ಉದ್ದೇಶ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್ ಸಿಂಗ್ ಅವರ ಕೊಡುಗೆ ಮತ್ತು ಜೀವನ ಚರಿತ್ರೆ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ದೇಶಪ್ರೇಮಿ ಭಗತ್ ಸಿಂಗ್ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ಸದಸ್ಯರು, ಯುವ ಬ್ರಿಗೇಡ್ ಕಾರ್ಯಕರ್ತರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಕಾವೇರಿ ಆಸ್ಪತ್ರೆಯಿಂದ ಬೃಹತ್ ಜಾಗೃತಿ ನಡಿಗೆ

ಮೈಸೂರು: ಅಧಿಕ ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಳ, ಕೊಲೆಸ್ಟ್ರಾಲ್, ಬೊಜ್ಜು, ಧೂಮಪಾನ, ದೈಹಿಕ ಚಟುವಟಿಕೆಯ ಕೊರತೆ ಹಾಗೂ ಅನಾರೋಗ್ಯಕರ ಆಹಾರ ಪದ್ಧತಿ ಹೃದಯದ ಆರೋಗ್ಯದ ಮೇಲೆ ಪರಿಣಾಮ ಬೀರಬಲ್ಲ ಪ್ರಮುಖ ಅಪಾಯಕಾರಿ ಅಂಶಗಳು. ಹೀಗಾಗಿ ಹೃದಯ ಕಾಯಿಲೆ ಕಾಣಿಸಿಕೊಂಡ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಆರೋಗ್ಯವಾಗಿರುವಾಗಲೇ ಅಪಾಯಕಾರಿ ಅಂಶಗಳನ್ನು ಗುರುತಿಸಿ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ ಎಂಬ ಸಂದೇಶವನ್ನು ಕಾವೇರಿ ಆಸ್ಪತ್ರೆ ವೈದ್ಯರು ಬೃಹತ್ ಜಾಗೃತಿ ಜಾಥಾ ಮೂಲಕ ಸಾರಿದರು.

ಮೈಸೂರಿನ ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಹೃದಯ ಆರೋಗ್ಯದ ಕುರಿತು ಜಾಗೃತಿ ಮೂಡಿಸಲು ಬೃಹತ್ ಜಾಗೃತಿ ನಡಿಗೆ ಹಾಗೂ ಆರೋಗ್ಯ ತಪಾಸಣಾ ಕಾರ್ಯಕ್ರಮ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಚಾಲನೆ ನೀಡಿ ಮಾತನಾಡಿ, ಆರೋಗ್ಯಕರ ಹೃದಯ ಉತ್ತಮ ಆರೋಗ್ಯದ ಆಧಾರವಾಗಿದ್ದು, ಸಾರ್ವಜನಿಕರಲ್ಲಿ ಹೃದಯ ಆರೋಗ್ಯದ ಅರಿವು ಹೆಚ್ಚಿಸಲು ಇಂತಹ ಜಾಗೃತಿ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದರು.

ಕಾವೇರಿ ಸಮೂಹದ ಅಧ್ಯಕ್ಷ ಡಾ.ಚಂದ್ರಶೇಖರ್ ಮಾತನಾಡಿ, ಕಾವೇರಿ ಆಸ್ಪತ್ರೆಯ ಹೃದ್ರೋಗ ಚಿಕಿತ್ಸಾ ತಂಡವು ಇದುವರೆಗೆ 10 ಸಾವಿರಕ್ಕೂ ಹೆಚ್ಚು ಆಂಜಿಯೋಪ್ಲಾಸ್ಟಿ ಹಾಗೂ 3 ಸಾವಿರಕ್ಕೂ ಹೆಚ್ಚು ಹೃದಯ ಶಸ್ತ್ರಚಿಕಿತ್ಸೆಗಳನ್ನು ನಡೆಸಿದ್ದು, ಚಿಕಿತ್ಸೆಯ ಜೊತೆಗೆ ಹೃದ್ರೋಗ ತಡೆ ಮತ್ತು ಆರೋಗ್ಯ ಜಾಗೃತಿಗೂ ಆದ್ಯತೆ ನೀಡಲಾಗುತ್ತಿದೆ ಎಂದರು. ಆಸ್ಪತ್ರೆಯ ನಿರ್ದೇಶಕಿ ಡಾ.ಸರಳಾ ಚಂದ್ರಶೇಖರ್, ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ತಜ್ಞ ಡಾ.ಗಣೇಶ್ ಕಾಮತ್, ಹೃದ್ರೋಗ ತಜ್ಞ ಡಾ.ಬಿ.ಇ.ಯತೀಶ್, ಹಿರಿಯ ಹೃದ್ರೋಗ ತಜ್ಞ ಡಾ.ರವಿಕುಮಾರ್ ಸೇರಿ ಇತರರು ಉಪಸ್ಥಿತರಿದ್ದರು.




## ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಪ್ರತಿಕೃತಿ ದಹಿಸಲು ಯತ್ನ

# ಮುಖ್ಯಚುನಾವಣಾ ಆಯುಕ್ತರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ

ರಾಮನಗರ: ಮತದಾರರ ಪಟ್ಟಿಯ ನಿರ್ವಹಣೆಯಲ್ಲಿ ಅಕ್ರಮಗಳು ನಡೆದಿವೆ. ಜ್ಞಾನೇಶ್ ಕುಮಾರ್ ಅಪರಾಧ ಮತ್ತು ದೇಶ ದ್ರೋಹದ ಕೃತ್ಯ ಎಸಗಿದ್ದಾರೆ. ಈ ಹಿನ್ನೆಲೆಯಲ್ಲಿ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು. ಮತ್ತು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದಲ್ಲಿರುವ ಸರ್ಕಾರಿ ಕಚೇರಿಗಳ ಸಂಕೀರ್ಣದ (ಡೀಸಿ ಕಚೇರಿ) ಬಳಿ ಜಮಾಯಿಸಿದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಪ್ರತಿಕೃತಿ ದಹಿಸಲು ಮುಂದಾದಾಗ ಪೋಲೀಸರು ಅಡ್ಡಿ ಪಡಿಸಿದರು. ಇದನ್ನು ಲೆಕ್ಕಿಸದ ಕಾಂಗ್ರೆಸ್ಸಿಗರು ಪ್ರತಿಕೃತಿ ದಹಿಸಿ ಬಿಜೆಪಿ ಪಕ್ಷದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣಾ ಆಯೋಗವನ್ನು ಬಿಜೆಪಿ ಕಾರ್ಯಾಲಯ ಮಾಡಬೇಡಿ. ದೇಶದಲ್ಲಿ ಸಂವಿಧಾನವೇ




ದೊಡ್ಡದು. ಜ್ಞಾನೇಶ್ ಕುಮಾರ್ ಕೂಡಲೇ ರಾಜೀನಾಮೆ ನೀಡಬೇಕೆಂಬ ಘೋಷಣೆಗಳನ್ನು ಕೂಗಿ ಕಾಂಗ್ರೆಸ್ಸಿಗರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

### ಚುನಾವಣಾ ಯೋಗ, ಬಿಜೆಪಿ ತಾಳಕ್ಕೆ ಕುಣಿಯುತ್ತಿದೆ - ಸಿ.ಎನ್.ಆರ್

ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಸಿ.ಎನ್.ಆರ್ ವೆಂಕಟೇಶ್ ಮಾತನಾಡಿ, ಚುನಾವಣಾ ಆಯೋಗವು ಸ್ವತಂತ್ರ ಮತ್ತು ಸಾಂವಿಧಾನಿಕ ಸಂಸ್ಥೆಯಾಗಿದ್ದು, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ ಎಂದು ಟೀಕಿಸಿದರು. ಎಸ್.ಐ.ಆರ್ ಪ್ರಕ್ರಿಯೆಯ ಹೆಸರಿನಲ್ಲಿ ಲಕ್ಷಾಂತರ ಅರ್ಹ ಮತದಾರರ ಹೆಸರುಗಳನ್ನು ಅಕ್ರಮವಾಗಿ ಮತ್ತು ಏಕಪಕ್ಷೀಯವಾಗಿ ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಗುತ್ತಿದೆ. ಕರ್ನಾಟಕದಲ್ಲಿಯೇ ಕೋಟ್ಯಂತರ ಮತದಾರರ ಹೆಸರನ್ನು ಪಟ್ಟಿಯಿಂದ ಡಿಲೀಟ್ ಮಾಡಲಾಗಿದೆ ಅಥವಾ ನಕಲಿ ವರ್ಗೀಕರಣದ ಹೆಸರಿನಲ್ಲಿ ಬ್ಲಾಕ್ ಮಾಡಲಾಗಿದೆ ಎಂದು ಆರೋಪಿಸಿದರು.

ಕೇಂದ್ರ ಚುನಾವಣಾ ಆಯೋಗವು ಕೈಗೊಂಡಿರುವ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮಗಳು ಮತ್ತು ಅಸಹಜ ಬದಲಾವಣೆಗಳು ನಡೆದಿವೆ. ಲಕ್ಷಾಂತರ ಅರ್ಹ ಮತದಾರರ ಹೆಸರುಗಳನ್ನು ಏಕಪಕ್ಷೀಯವಾಗಿ ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ರಮೇಶ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು, ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಬಿ.ಚೇತನ್ ಕುಮಾರ್, ವಿ.ಎಚ್.ರಾಜು, ಪೂಜಾರಿಪಾಳ್ಯ ಕೃಷ್ಣಮೂರ್ತಿ, ವೆಂಕಟೇಶ್, ಪ್ರಮೋದ್ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾಧ್ಯಕ್ಷ ಎಚ್.ನರಸಿಂಹಯ್ಯ, ಮುಖಂಡರಾದ ಕಲ್ಪನಾ ಶಿವಣ್ಣ, ಕೋಕಿಲಾ, ಗಿರಿಜಮ್ಮ, ಆಯಿಷಾ ಬಾನು, ಬೈರೇಗೌಡ, ಗುರುಪ್ರಸಾದ್, ರವಿ, ರೈಡ್ ನಾಗರಾಜು, ಪುಟ್ಟರಾಜು, ಕುರುಬಳ್ಳಿ ರಘು, ದೇವರಾಜು, ಅನಿಲ್ ಜೋಗೆಂದರ್, ಭೂಷಣ್, ಫೈರೋಜ್ ಖಾನ್, ಶಂಭೂಗೌಡ, ನರಸಿಂಹಯ್ಯ, ಗುಡ್ಡೆವೆಂಕಟೇಶ್, ಶಿವಶಂಕರ್, ಚಿಕ್ಕಸ್ವಾಮಿ, ಕೈಲಾಂಚ ಗಿರಿ ಮತ್ತಿತರರು ಭಾಗವಹಿಸಿದ್ದರು.

# ಹನೂರಿನ ವಿವಿಧೆಡೆ ರಾತ್ರಿಯಿಡಿ ಮಳೆ: ಕೆರೆಗಳು ಭರ್ತಿ

ಚಾಮರಾಜನಗರ: ಮಳೆ ಕೊರತೆ ಹಿನ್ನೆಲೆ ಕಂಗಲಾಗಿದ್ದ ಜನರು ಈಗ ನಿರಾಳರಾಗಿದ್ದು, ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಬಹುತೇಕ ಕಡೆ ರಾತ್ರಿಯಿಡೀ ಭರ್ಜರಿ ಮಳೆಯಾಗಿದೆ.

ತಡರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಹುಬ್ಬೆ ಹುಣಸೆ ಜಲಾಶಯ ಸಂಪೂರ್ಣವಾಗಿ ಭರ್ತಿಯಾಗಿ ಕೋಡಿ ಬಿದ್ದಿದೆ. ಜೊತೆಗೆ, ಉಡುತೊರೆ ಜಲಾಶಯ, ತಟ್ಟೆಹಳ್ಳ, ಸ್ವಾಮಿಹಳ್ಳ ತುಂಬಿ ಸೇತುವೆ ಮೇಲೆ ನೀರು ಹರಿದ ಪರಿಣಾಮ ಹನೂರು ಪಟ್ಟಣದ ಬಡಾವಣೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡಿದರು.

ಹುಬ್ಬೆಹುಣಸೆ ಡ್ಯಾಂ ಭರ್ತಿಯಾಗಿ ಕೋಡಿ ಬಿದ್ದ ಪರಿಣಾಮ ಹನೂರಿನ ಪಟ್ಟಣದ ತಟ್ಟೆಹಳ್ಳ ತುಂಬಿ ದಿಡೀರ್? ಹರಿದ ಪರಿಣಾಮ ದೇವಾಂಗಪೇಟೆ ಮತ್ತು ಸುತ್ತಮುತ್ತಲಿನ ವಸತಿ ಪ್ರದೇಶಗಳು ಹಾಗೂ ರಸ್ತೆಗಳು ಸಂಪೂರ್ಣವಾಗಿ ಜಲಾವೃತಗೊಂಡು ನಿವಾಸಿಗಳು ಪರದಾಡುವಂತಾಗಿತ್ತು. ದೇವಾಂಗಪೇಟೆಯ ಮುಖ್ಯ ರಸ್ತೆಯ ಸೇತುವೆ ಮೇಲೆ ಐದಾರು ಅಡಿಗೂ ಹೆಚ್ಚು ನೀರು ಹರಿಯುತ್ತಿದ್ದರಿಂದ ವಾಹನ ಹಾಗೂ ಪಾದಚಾರಿಗಳ ಸಂಚಾರಕ್ಕೂ ಅಡಚಣೆ ಉಂಟಾಗಿತ್ತು.

ರಾತ್ರಿ ಸುರಿದ ಭಾರಿ ಮಳೆಗೆ ತತ್ತರಿಸಿದ ಮಾರ್ಟಳ್ಳಿ ಗ್ರಾಮ: ಹನೂರು ತಾಲೂಕಿನ ಮಾರ್ಟಳ್ಳಿ ಗ್ರಾಮ



ಪಂಚಾಯಿತಿ ವ್ಯಾಪ್ತಿಯಲ್ಲಿ ನಿನ್ನೆ ರಾತ್ರಿ ಸುರಿದ ಭಾರಿ ಮಳೆಗೆ ಮನೆಗಳು, ಅಂಗಡಿಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ. ಮಳೆಯ ಆರ್ಭಟಕ್ಕೆ ಸ್ಥಳೀಯ ನಿವಾಸಿ ರಂಗಮ್ಮ, ಜ್ಯೋತಿ ಎಂಬುವರ ಮನೆಗೆ ಸಂಪೂರ್ಣವಾಗಿ ನೀರು ನುಗ್ಗಿದ್ದು ಆಹಾರ ಧಾನ್ಯಗಳು, ಬಟ್ಟೆ ಹಾಗೂ ದಿನಬಳಕೆಯ ವಸ್ತುಗಳು ನೀರಿನಲ್ಲಿ ಕೊಚ್ಚಿಹೋಗಿವೆ. ಅಷ್ಟೇ ಅಲ್ಲದೆ, ಕುಟುಂಬದ ಜೀವನೋಪಾಯಕ್ಕೆ ಆಸರೆಯಾಗಿದ್ದ 2 ಕುರಿಗಳು ಹಾಗೂ 20 ಕೋಳಿಗಳು ನೆರೆ ನೀರಿನಲ್ಲಿ ಕೊಚ್ಚಿಹೋಗಿದೆ ಎಂದು ಮಹಿಳೆ ಅಳಲು ತೋಡಿಕೊಂಡಿದ್ದಾರೆ.

**ಬರದ ನಡುವೆ ಭರವಸೆ**

ಹುಬ್ಬೆಹುಣಸೆ ಜಲಾಶಯ ಸಂಪೂರ್ಣವಾಗಿ ಭರ್ತಿಯಾಗಿ ಕೋಡಿ ಬಿದ್ದಿದೆ. ಹನೂರು ಶಾಸಕ ಎಂ.ಆರ್. ಮಂಜುನಾಥ್ ಭೇಟಿ ನೀಡಿ ಜಲಾಶಯವನ್ನು ಪರಿಶೀಲಿಸಿದರು. ಈ ವೇಳೆ ಮಾತನಾಡಿದ ಶಾಸಕರುಟಿ, ಕಳೆದ ಹಲವು ತಿಂಗಳಿಂದ ಸಮರ್ಪಕ ಮಳೆಯಾಗದೇ ಹನೂರು ತಾಲೂಕಿನಲ್ಲಿ ಭೀಕರ ಬರ ಆವರಿಸಿತ್ತು. ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಸಮಸ್ಯೆಯಾಗಿತ್ತು. ಆದರೆ ಕಳೆದ ಒಂದು ವಾರದಿಂದ ಕ್ಷೇತ್ರ ವ್ಯಾಪ್ತಿಯಲ್ಲಿ ನಿರಂತರವಾಗಿ ಮಳೆಯಾಗುತ್ತಿರುವುದರಿಂದ ಬರ ಆವರಿಸಿದ್ದ ಜಾಗದಲ್ಲಿ ಭರವಸೆ ಮೂಡಿದೆ ಎಂದು ತಿಳಿಸಿದರು

ರಸ್ತೆಗೆ ಉರುಳಿದ ಬಂಡೆಕಲ್ಲುಗಳು: ತಡರಾತ್ರಿ ಸುರಿದ ರಣ ರಕ್ಕಸ ಮಳೆಗೆ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ರಸ್ತೆಗೆ ಬಂಡೆಗಲ್ಲುಗಳು ಉರುಳಿ ಬಿದ್ದ ಘಟನೆ ನಡೆದಿದೆ. ನಿನ್ನೆ ರಾತ್ರಿ ಸುರಿದ ಭಾರಿ ಮಳೆಗೆ ರಸ್ತೆಯ ಮೇಲೆ ಕಲ್ಲುಗಳು ಹಾಗೂ ಮಣ್ಣು ಬಿದ್ದು ಬೆಟ್ಟದ ಮುಖ್ಯರಸ್ತೆಯೇ ಕೆಸರುಮಯವಾಗಿದೆ.

# ಭಗತ್ ಸಿಂಗ್ 119ನೇ ಜನ್ಮದಿನ



ಚಾಮರಾಜನಗರ,ಕೋಡಿಮೋಳೆ ಗ್ರಾಮದಲ್ಲಿ ಭಗತ್ ಸಿಂಗ್ ಯುವಸೇನೆ ವತಿಯಿಂದ ಗ್ರಾಮದ ಭಗತ್ ಸಿಂಗ್ ನಾಮಫಲಕದ ಬಳಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ ಇಂಕ್ವಿಲಾಬ್ ಜಿಂದಾಬಾದ್ , ಭಗತ್ ಸಿಂಗ್ ಅಮರ್ ರಹೇ ಎಂಬ ಘೋಷವಾಕ್ಯಗಳ ಮೂಲಕ ಧೀರ ಹುತಾತ್ಮ ಭಗತ್ ಸಿಂಗ್ ಅವರ ಜನ್ಮ ದಿನೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಭಗತ್ ಸಿಂಗ್ ಯುವಸೇನೆ ಅಧ್ಯಕ್ಷ ಕಾಂತರಾಜು ಭಾರತದ ಕ್ರಾಂತಿಕಾರಿ ಸ್ವಾತಂತ್ರ ಹೋರಾಟಗಾರ ಭಗತ್ ಸಿಂಗ್ ಅವರು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿ ತಮ್ಮ 23ನೇ ವಯಸ್ಸಿಗೆ ತಮ್ಮ ಜೀವವನ್ನು ತ್ಯಾಗ ಮಾಡಿದ್ದಾರೆ. ಇಂತಹ ಕ್ರಾಂತಿಕಾರಿ ಹೋರಾಟಗಾರ ಆದರ್ಶ ಮತ್ತು ಮಹನೀಯರ ಚರಿತ್ರೆಗಳನ್ನು ಚಿಂತನೆಗಳನ್ನು ಇಂದಿನ ಯುವಕರು, ವಿದ್ಯಾರ್ಥಿಗಳು ಮೈಗೂಡಿಸಿಕೊಂಡು ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕು ಎಂದರು ಶಿವು ರಾಜೇಂದ್ರ, ಪ್ರಸಾದ್, ರವಿ, ಮಹೇಶ್, ಮಲ್ಲೇಶ್, ನಂಜಪ್ಪ, ಪ್ರಕಾಶ್ ಸೇರಿದಂತೆ ಇತರರು ಇದ್ದರು,

## ಅ.2ರಂದು ತಿ.ನರಸೀಪುರದಲ್ಲಿ ಸೌಹಾರ್ದ ಸಮಾವೇಶ




ಮೈಸೂರು: ಟಿ. ನರಸೀಪುರ ಪೊಲೀಸ್ ಅಧಿಕಾರಿ ಗಣಪತಿ ಉತ್ಸವ ಸಂದರ್ಭದಲ್ಲಿ ನೀಡಿದ ಎಚ್ಚರಿಕೆಯನ್ನೇ ದುರುಪಯೋಗ ಪಡಿಸಿಕೊಂಡು ದೇವರು, ಧರ್ಮ, ಜಾತಿ ವಿಂಗಡಿಸಿ ಭಾವನಾತ್ಮಕ ರಾಜಕಾರಣ ಮಾಡಿದ್ದನ್ನು ಖಂಡಿಸಿ, ಸೌಹಾರ್ದತೆಗೆ ದುಡಿದ ಪ್ರಜ್ಞಾವಂತರ ಮಾನವೀಯ ಆಶಯ ಮರು ಸ್ಥಾಪಿಸಲು ಅ.2 ರಂದು ದಲಿತ ಸಂಘರ್ಷ ಸಮಿತಿ ಮೊದಲಾದವುಗಳಿಂದ ಟಿ. ನರಸೀಪುರದಲ್ಲಿ ಸಮಾವೇಶ ಆಯೋಜಿಸಿರುವುದಾಗಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆಯ ಪದಾಧಿಕಾರಿ ಆಲಗೂಡು ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ 10ಕ್ಕೆ ಎಪಿಎಂಸಿ ಆವರಣದಲ್ಲಿ ಸಮಾವೇಶ ನಡೆಯಲಿದೆ. ಇದಕ್ಕೂ ಮೊದಲು ಅಲ್ಲಿನ ಭಗವಾನ್ ವೃತ್ತದಿಂದ ಮೆರವಣಿಗೆ ಆರಂಭವಾಗಿ ಸಮಾವೇಶ ತಲುಪಲಿದೆ. ದಸಂಸದ ಹಿರಿಯ ಹೋರಾಟಗಾರರಾದ ಗುರುಪ್ರಸಾದ್ ಕೆರಗೋಡು, ಮಾವಳ್ಳಿ ಶಂಕರ್, ಎನ್. ವೆಂಕಟೇಶ್, ಡಿ.ಜಿ. ಸಾಗರ್, ಎನ್. ಮುನಿಸ್ವಾಮಿ, ಇಂದೂಧರ ಹೊನ್ನಾಪುರ, ಹರಿಹರ ಆನಂದಸ್ವಾಮಿ, ಬೆಟ್ಟಯ್ಯಕೋಟೆ, ಜೀವನಹಳ್ಳಿ ವೆಂಕಟೇಶ್, ರೈತ ಸಂಘದ ಬಡಗಲಪುರ ನಾಗೇಂದ್ರ ಇನ್ನಿತರರು ಪಾಲ್ಗೊಳ್ಳುವರು. ರೈತ ಸಂಘ, ಪ್ರಗತಿಪರ ಸಂಘಟನೆಗಳು ಇದಕ್ಕೆ ಕೈಗೂಡಿಸಿವೆ ಎಂದರು.

ಟಿ. ನರಸೀಪರ ಪಟ್ಟಣದಲ್ಲಿ ಈ ಸಲದ ಗಣೇಶ ವಿಸರ್ಜನೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಠಾಣಾಧಿಕಾರಿ ಮಾತನ್ನು ತಿರುಚಿ ಬಿಜೆಪಿ, ಆರ್‌ಎಸ್‌ಎಸ್ ಪರಿವಾರದ ಮುಖಂಡರು ಕೋಮು ದ್ವೇಷದ ಬಣ್ಣ ಬಳಿಯಲು ಯತ್ನಿಸಿರುವುದು ಖಂಡನೀಯ. ಮಾಜಿ ಸಂಸದ ಪ್ರತಾಪ್‌ಸಿಂಹ ಸಹಾ ಠಾಣೆಗೆ ನುಗ್ಗುವುದಾಗಿ ಹೇಳಿ, ಇನ್‌ಸ್ಪೆಕ್ಟರ್‌ಗೆ ಬುದ್ಧಿ ಕಲಿಸುವುದಾಗಿ ಹೇಳಿರುವುದು, ನೀಲಿ ಶಾಲಿನ ಬಗ್ಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ. ಹೀಗಾಗಿ ಅವರು ಕ್ಷಮೆ ಯಾಚಿಸಬೇಕೆಂದು ಸಹಾ ಈ ವೇಳೆ ಒತ್ತಾಯಿಸಲಾಗುವುದೆಂದರು. ಮಲ್ಲೇಶ್ ಚುಂಚನಹಳ್ಳಿ, ಶಂಭುಲಿಂಗಸ್ವಾಮಿ, ಬನ್ನಹಳ್ಳಿ ಸೋಮಣ್ಣ, ಕಾರ್ಯ ಬಸವಣ್ಣ, ನಾಗರಾಜು, ಇನ್ನಿತರರು ಇದ್ದರು.

## ಕಾಡಾನೆಗೆ ಅಪಘಾತ ಮಾಡಲು ಯತ್ನ



ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಸ್ತೆಯಲ್ಲಿ ಕಾಡಾನೆ ಸಂಚರಿಸುತ್ತಿರುವುದನ್ನು ಗಮನಿಸಿಯೂ ಲಾರಿ ಚಾಲಕನೊಬ್ಬ ವಾಹನವನ್ನು ಮುಂದಕ್ಕೆ ಚಲಾಯಿಸಿರುವ ಘಟನೆ ವನ್ಯಜೀವಿ ಪ್ರಿಯರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ರಸ್ತೆಗೆ ಬಂದಿದ್ದ ಆನೆಯನ್ನು ಕಂಡು ವಾಹನವನ್ನು ನಿಧಾನಗೊಳಿಸಿ, ಸುರಕ್ಷಿತ ಅಂತರ ಕಾಯ್ದುಕೊಳ್ಳುವ ಬದಲು ಲಾರಿ ಚಾಲಕ ಮುನ್ನುಗ್ಗಿಸಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ ಎನ್ನಲಾಗಿದೆ. ಅರಣ್ಯ ಪ್ರದೇಶದಲ್ಲಿ ಸಂಚರಿಸುವ ವಾಹನಗಳ ಚಾಲಕರು ವನ್ಯಜೀವಿಗಳ ಸುರಕ್ಷತೆಗೆ ಆದ್ಯತೆ ನೀಡಬೇಕು. ಕಾಡಾನೆ ಸೇರಿದಂತೆ ಯಾವುದೇ ವನ್ಯಜೀವಿಗಳು ರಸ್ತೆ ದಾಟುವ ಸಂದರ್ಭದಲ್ಲಿ ವಾಹನ ನಿಲ್ಲಿಸಿ, ಅವುಗಳಿಗೆ ದಾರಿ ಮಾಡಿಕೊಡಬೇಕು. ಆದರೆ ಈ ಘಟನೆಯಲ್ಲಿ ಚಾಲಕ ತೋರಿದ ನಿರ್ಲಕ್ಷ್ಯಕ್ಕೆ ವನ್ಯಜೀವಿ ಪ್ರಿಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬಂಡೀಪುರದಲ್ಲಿ ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ನಿಯಮಗಳನ್ನು ವಾಹನ ಸವಾರರು ಕಟ್ಟುನಿಟ್ಟಾಗಿ ಪಾಲಿಸುವಂತೆ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ವನ್ಯಜೀವಿ ಪ್ರಿಯರು ಒತ್ತಾಯಿಸಿದ್ದಾರೆ.



**ಮೈಸೂರಿನಲ್ಲಿ ಅವಧಿ ಮೀರಿದ 39.44ಲಕ್ಷ ರೂ. ಮೌಲ್ಯದ ಮದ್ಯವನ್ನು ಮೈಸೂರು ಅಬಕಾರಿ ಅಧಿಕಾರಿಗಳು ನಾಶಪಡಿಸಿದ್ದಾರೆ. ವಿವಿಧ ಬ್ರ್ಯಾಂಡ್ಗಳ 17,956.78 ಲೀಟರ್ ಬಿಯರ್ ಅನ್ನು ಮೈಸೂರಿನ ಕೂರ್ಗಳ್ಳಿಯ ಕೆಎಸ್‌ಬಿಸಿಎಲ್ ಡಿಪೋದಲ್ಲಿ ನಾಶಪಡಿಸಲಾಗಿದೆ.**

# ದೇಶದ ವೋಟ್ ಚೋರಿ ಆಗುತ್ತಿಲ್ಲ

## ಚೋರ್‌ಗಳಿಗೆ ಜನ ಮತ ಹಾಕುತ್ತಿಲ್ಲ: ಛಲವಾದಿ ನಾರಾಯಣಸ್ವಾಮಿ

ಮೈಸೂರು: ದೇಶದ ವೋಟ್ ಚೋರಿ (ಮತ ಕಳ್ಳತನ) ಆಗುತ್ತಿಲ್ಲ, ಬದಲಾಗಿ ಜನರು ಚೋರ್ಗಳಿಗೆ (ಕಳ್ಳರಿಗೆ) ವೋಟ್ ಹಾಕುತ್ತಿಲ್ಲ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಕಾಂಗ್ರೆಸ್ ನಾಯಕರ ಮತ ಚೋರಿ ಆರೋಪದ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,



ಕಾಂಗ್ರೆಸ್ ಎಲ್ಲೆಲ್ಲಿ ಗೆದ್ದಿದೆಯೋ ಅಲ್ಲೆಲ್ಲಾ ವೋಟ್ ಚೋರಿ ಆಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಅಲ್ಲಿನ ಜನರು ಕಾಂಗ್ರೆಸ್ಗೆ ವೋಟ್ ಹಾಕಿಲ್ಲ, ಒಂದು ಸೀಟನ್ನೂ ಸಹ ಗೆಲ್ಲಲು ಆಗುವುದಿಲ್ಲ. ಆದರೆ, ಅಲ್ಲಿ ವೋಟ್ ಚೋರಿ ಎಂದು ಆರೋಪಿಸಲಾಗಿದೆ. ಮೊದಲಿನ ರೀತಿ ಈಗ ಮತಗಳ ಕಳ್ಳತನವಾಗುತ್ತಿಲ್ಲ. ಬದಲಾಗಿ ಜನರು ಕಳ್ಳರಿಗೆ ಮತ ಹಾಕುತ್ತಿಲ್ಲ. ಬಿಜೆಪಿ ಅವರು ಜನರಿಗೆ, ಕಳ್ಳರಿಗೆ ವೋಟ್ ಹಾಕಿ ಎಂದು ಹೇಳಲು ಆಗುವುದಿಲ್ಲ. ರಾಹುಲ್ ಗಾಂಧಿಗೆ ದೇಶದಲ್ಲಿ ಯಾವುದೇ ಭ್ರಷ್ಟಾಚಾರ ಸಾಧ್ಯವಾಗಲಿಲ್ಲ. ಆರ್ಥಿಕವಾಗಿ ದೇಶ ಮುಂದುವರಿಯುತ್ತಿದೆ, ಅಭಿವೃದ್ಧಿ ಬಹಳ ವೇಗವಾಗಿ ಸಾಗುತ್ತಿದೆ. ಇದರಿಂದ ಜನರು ಬಹಳ ಸಂತುಷ್ಟರಾಗಿದ್ದಾರೆ, ಆದರೆ ಇದನ್ನು ಕಾಂಗ್ರೆಸ್ಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅವರು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ, ಪ್ರಮುಖರಾದ ಎಸ್.ಮಹದೇವಯ್ಯ, ಅನಿಲ್ ಥಾಮಸ್, ಶೈಲೇಂದ್ರ, ರುದ್ರಮೂರ್ತಿ, ಅಶೋಕ್, ವಿನಯ್ ಕುಮಾರ್, ಅನಿಲ್ ಕುಮಾರ್, ಕಾರ್ತಿಕ್ ಮರಿಯಪ್ಪ, ಅರ್ಜುನ್, ಪಾರ್ಥ, ಪರಶುರಾಮ್, ಶ್ರೀನಿವಾಸ್, ವಸಂತ್ ಕುಮಾರ್, ಪರಮಾನಂದ ಇತರರಿದ್ದರು.

### ಗೃಹ ಸಚಿವರ ರಾಜೀನಾಮೆಗೆ ಆಗ್ರಹ

ರಾಜ್ಯದಲ್ಲಿ ದಲಿತರ ಮೇಲೆ ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳು ಹೆಚ್ಚಾಗುತ್ತಿವೆ. ಪೊಲೀಸರ ವರ್ಗಾವಣೆಯಲ್ಲಿಯೂ ಸಹ ದೊಡ್ಡ ದಂಧೆ ನಡೆಯುತ್ತಿದೆ. ಆದರೂ ಗೃಹ ಸಚಿವರು ಯಾವುದೇ ರೀತಿಯ ಪ್ರತಿಕ್ರಿಯೆ ನೀಡುತ್ತಿಲ್ಲ. ಹೀಗಾಗಿ ರಾಜ್ಯದ ಗೃಹಿಣಿ ಪ್ರಿಯಾಂಕ್ ಖರ್ಗೆ ಅವರು ಕೂಡಲೇ ತಮ್ಮ ಸ್ಥಾನಕ್ಕೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಅವರು ಹೇಳಿದ್ದಾರೆ.

### ಕಾಂಗ್ರೆಸ್ ದ್ವಂದ್ವ ನೀತಿ

ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಶ್ರೀಲಂಕಾದವರು ಕಾಂಗ್ರೆಸ್ ಪಕ್ಷದ ಮತದಾರರಾಗಿದ್ದರೆ ಅವರನ್ನು ಆಯ್ಕೆ ಮಾಡಲು ಬಿಡಬೇಕೇ? ಇಂತಹವರನ್ನು ಮತದಾರರ ಪಟ್ಟಿಯಿಂದ ತೆಗೆಯಬೇಕೆಂದರೆ ಯಾರಿಗೂ ಹೇಳಬೇಕಾಗಿಲ್ಲ. ಕರ್ನಾಟಕದಲ್ಲಿ ಈಗ ಎಸ್ಐಆರ್ (ಎಸ್ಐಆರ್) ಬಂದಿದೆ. ವೋಟ್ ಚೋರಿ ಎನ್ನುವ ಕಾಂಗ್ರೆಸ್ ಪಕ್ಷವು ಈ ಬಾರಿ ರಾಜ್ಯದಲ್ಲಿ 136 ಸ್ಥಾನಗಳನ್ನು ಗೆದ್ದಾಗ ವೋಟ್ ಚೋರಿಯಾಗಿತ್ತೇ? ತೆಲಂಗಾಣ, ಕೇರಳ ಹಾಗೂ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಗೆದ್ದಾಗ ವೋಟ್ ಚೋರಿಯಾಗಿತ್ತೇ ಎಂದು ಅವರು ಪ್ರಶ್ನಿಸಿದರು.

### ಕೇಂದ್ರದಿಂದ ಸಮರ್ಥವಾಗಿ ಬರ ಪರಿಹಾರ: ರಾಜ್ಯ ಸರ್ಕಾರಕ್ಕೆ ಒತ್ತಾಯ

ಕಳೆದ ಬಾರಿ ರಾಜ್ಯ ಸರ್ಕಾರದ ಬರ ಅಧ್ಯಯನ ನಡೆಸಿ ಪರಿಹಾರ ಘೋಷಣೆ ಕೇಂದ್ರಕ್ಕೆ ನ್ಯಾಯಾಲಯದ ಮೊರೆ ಹೋಗಿದೆ. ಅಲ್ಲಿ ಪ್ರಕಟಿಸುವುದಕ್ಕೂ ನ್ಯಾಯಾಲಯದ ಆದೇಶ ಬರುವುದಕ್ಕೂ ಸಮನಾಗಿತ್ತು. ಆದರೆ ಈ ಬಾರಿ ಸರ್ಕಾರವೇ ಪ್ರಸ್ತುತವಾಗಿ ಬರ ಕೇಂದ್ರ ಅಧ್ಯಯನ ನಡೆಸಿ ನೀಡಲಿದೆ ಎಂದು ನಾರಾಯಣಸ್ವಾಮಿ ಅವರು ಪರಿಹಾರ ನೀಡಿದರು. ರಾಜ್ಯ ಸರ್ಕಾರ ಬರ ಅಧ್ಯಯನ ನಡೆಸಿ ವರದಿ ನೀಡಿದೆ. ಜೊತೆಗೆ ಕೇಂದ್ರದಿಂದಲೂ ಬರ ಅಧ್ಯಯನ ತಂಡ ಬರುತ್ತಿದೆ, ಅದನ್ನು ಸ್ವಾಗತಿಸುತ್ತೇವೆ. ಅಂತಿಮವಾಗಿ ಕೇಂದ್ರ ಸರ್ಕಾರವೇ ಬರ ಪರಿಹಾರ ಬಿಡುಗಡೆ ಮಾಡಲಿದೆ. ಈ ನಡುವೆ ರಾಜ್ಯ ಸರ್ಕಾರವು ರೈತರಿಗೆ ಕನಿಷ್ಠ 25,0000 ರೂ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ 25,000 ರೂ. ನೀಡಿದ್ದರು, ಅದನ್ನೇ ಈಗ ಮುಂದುವರಿಸಬೇಕು. ಈ ಘೋಷಣೆ ಮಾಡದೇ ಕೇವಲ ಕೇಂದ್ರಕ್ಕೆ ಪರಿಹಾರ ಕೇಳಲು ಹೋಗುವುದಾದರೆ ನಾವು ರಾಜ್ಯ ಸರ್ಕಾರವನ್ನು ಬೆಂಬಲಿಸುವುದಿಲ್ಲ. ಮೊದಲು ರಾಜ್ಯದ ರೈತರಿಗೆ ರಾಜ್ಯ ಸರ್ಕಾರ ಸೂಕ್ತ ಪರಿಹಾರ ಪ್ರಕಟಿಸಿದೆ. ಕೇವಲ 2,500 ರೂ. ಹೇಳಿರುವುದು ರೈತ ವಿರೋಧಿಯಾಗಿದೆ. ವಿಶೇಷ ಅಧಿವೇಶನ ನಡೆದಿದ್ದು ರೈತರಿಗೆ ಉತ್ತಮ ಪ್ಯಾಕೇಜ್ ಘೋಷಣೆಯಾಗುವ ನಿರೀಕ್ಷೆಯಿದೆ, ಆದರೆ ಅದು ಹುಸಿಯಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

## ನಾಳೆ ಯೋಗ ಅರಿವು ಕಾರ್ಯಕ್ರಮ

ಮೈಸೂರು: ರಾಂಚಿಯಲ್ಲಿ ಪರಮಹಂಸ ಯೋಗಾನಂದರಿಂದ 1917 ರಲ್ಲಿ ಸ್ಥಾಪಿಸಲ್ಪಟ್ಟ ಯೋಗದಾ ಸತ್ಸಂಗ ಸೊಸೈಟಿ ವತಿಯಿಂದ ಅ. 1 ರ ಸಂಜೆ 6 ರಿಂದ 7.15 ರವರೆಗೆ ಗುರು ರೆಸಿಡೆನ್ಸಿ ಬಳಿಯ ಗೋವಿಂದರಾವ್ ಸ್ಮಾರಕ ಭವನದಲ್ಲಿ ಕ್ರಿಯಾ ಯೋಗ: ಯಶಸ್ವಿ ಹಾಗೂ ಆನಂದಮಯ ಜೀವನಕ್ಕೆ ಸಾಧನ ವಿಷಯ ಕುರಿತ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸ್ಥಳೀಯ ಅಧ್ಯಕ್ಷ ಶ್ರೀನಿವಾಸಯ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಹಿರಿಯ ಸನ್ಯಾಯ ಸ್ವಾಮಿ ಶುದ್ಧಾನಂದ ಗಿರಿ ಉಪನ್ಯಾಸ ನೀಡಲಿದ್ದಾರೆ. ಈ ವೇಳೆ ಯೋಗದಾ ಸತ್ಸಂಗ ಧ್ಯಾನ ತಂತ್ರ ಕಲಿಸಲಾಗುವುದು. ಇದು ಸಂಪೂರ್ಣ ಉಚಿತ ಕಾರ್ಯಕ್ರಮವಾಗಿದೆ. ಇದಾದ ಬಳಿಕ ಅ. 2 ರಿಂದ 4 ರವರೆಗೆ ಕ್ರಿಯಾ ಯೋಗ ಅಭ್ಯಾಸ ತರಗತಿ ಇರಲಿವೆ. ಇದರಲ್ಲಿ ಸದಸ್ಯರು ಮಾತ್ರ ಪಾಲ್ಗೊಳ್ಳಬಹುದು. ಶುಲ್ಕ 2 ಸಾವಿರ ರೂ.ಗಳಾಗಿವೆ. ಹೊರಗಿನಿಂದ ಬಂದವರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದೆಂದರು. ಸದಸ್ಯರಾದ ಪೆರಿಯ ಕರ್ಪನ್, ಸುಬ್ರಹ್ಮಣ್ಯ, ಉಷಾದೇವಿ, ಭಾಸ್ಕರ್ ಇದ್ದರು.




## ಒಳ್ಳೆಯ ಹವ್ಯಾಸಗಳಿಂದ ಹೃದಯ ಸಮಸ್ಯೆಗಳಿಂದ ಪಾರು

ಚಾಮರಾಜನಗರ: ಶುದ್ಧ ಜೀವನ ಪದ್ಧತಿ, ವ್ಯಾಯಾಮ, ಆಹಾರ, ನಡಿಗೆ, ಒಳ್ಳೆಯ ಹವ್ಯಾಸಗಳಿಂದ ಹೃದಯ ಸಮಸ್ಯೆಗಳಿಂದ ಪಾರಾಗಬಹುದು ಎಂದು ಜೈಹಿಂದ್ ಪ್ರತಿಷ್ಠಾನದ ಅಧ್ಯಕ್ಷರು, ಉಪನ್ಯಾಸಕ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ಶ್ರೀ ಚಾಮರಾಜೇಶ್ವರ ದೇವಸ್ಥಾನದ ಉದ್ಯಾನವನದ ಮುಂಭಾಗದಲ್ಲಿ ಜೈ ಹಿಂದ್ ಪ್ರತಿಷ್ಠಾನ, ಋಗ್ವೇದಿ ಯುತ್ ಕ್ಲಬ್, ವಾಯು ವಿಹಾರಗಳ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಘಟನೆಗಳ ಒಕ್ಕೂಟ ಸಂಯುಕ್ತವಾಗಿ ಹಮ್ಮಿಕೊಂಡಿದ್ದ ವಿಶ್ವ ಹೃದಯ ದಿನ ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಹೃದಯದ ಸಮಸ್ಯೆಗಳು ವ್ಯಾಪಕವಾಗಿ ಕಾಡುತ್ತಿದೆ. ಮಕ್ಕಳಿಂದ ವೃದ್ಧರವರೆಗೆ ಹೃದಯ ಕಾಯಿಲೆಗಳು ನಮಗೆ ಅರಿವಿಲ್ಲದೆ ವ್ಯಾಪಿಸಿದೆ. ಹೃದಯವು ಪವಿತ್ರವಾದ ಮೌಲ್ಯವಾದ ಅಂಗ. ಹೃದಯದ ಬಡಿತ ನಿಂತರೆ ಮಾನವನ ಅಂತ್ಯವಾಗುವುದು. ಸೆಪ್ಟೆಂಬರ್ 29ರ ವಿಶ್ವ ಹೃದಯ ದಿನದ ಘೋಷಣೆ ಹೃದಯ ಬ ಡಿತವನ್ನು ತಪ್ಪಿಸಿಕೊಳ್ಳಬೇಡಿ ಎಂದು ತಿಳಿಸಿದರು. ಪ್ರತಿನಿತ್ಯ ವಾಯುವಿಹಾರಿಗಳಾಗಿ ವ್ಯಾಯಾಮ,ನಡಿಗೆ ಶುದ್ಧ ಆಹಾರ, ಶುದ್ಧ ಹವ್ಯಾಸ ಬೆಳೆಸಿಕೊಳ್ಳಿ. ಹಣ್ಣುಗಳು ಸೊಪ್ಪು ತರಕಾರಿಗಳ ಬಳಕೆ ಹೆಚ್ಚಾಗಲಿ. ಒತ್ತಡದ ಕಾಯಕವನ್ನು ಬಗೆಹರಿಸಿಕೊಳ್ಳಿ. ಸಮಯದ ನಿರ್ವಹಣೆಯ ಮೂಲಕ ಕಾರ್ಯ ಒತ್ತಡ ಮುಕ್ತರಾಗಿ. ಕುಟುಂಬದವರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿ. ಸಮಾಜ ಹಾಗೂ ಸರ್ವರನ್ನು ಪ್ರೀತಿಸುವ ಗುಣವನ್ನು ಬೆಳೆಸಿಕೊಂಡು,



ಧ್ಯಾನ,ಯೋಗ,ನಡಿಗೆ, ಅಧ್ಯಯನ ಅಳವಡಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು. ದೇಹಕ್ಕೆ ಉತ್ತಮವಾದ ಶಾಂತ ವಾತಾವರಣವನ್ನು ಸೃಷ್ಟಿಸುವ ಮೂಲಕ ಹೃದಯ ಬಡಿತವನ್ನು ನಿಲ್ಲದಿರುವಂತೆ ಜಾಗೃತಿ ಮೂಡಿಸುವುದೇ ವಿಶ್ವ ಹೃದಯ ದಿನದ ಉದ್ದೇಶವಾಗಿದೆ. ಚಾಮರಾಜನಗರದಲ್ಲಿ ವಾಯು ವಿಹಾರಿಗಳ ಸಂಘ, ಜೈ ಹಿಂದ್ ಪ್ರತಿಷ್ಠಾನ ಮೊಟ್ಟಮೊದಲಿಗೆ ಜಾಗೃತಿಯ ಕಾರ್ಯಕ್ರಮವನ್ನು ರೂಪಿಸಿದೆ. ಪ್ರತಿ ವಾರ ಆರೋಗ್ಯ ಜಾಗೃತಿಯ ಕಾರ್ಯಕ್ರಮಗಳನ್ನು ರೂಪಿಸೋಣ ಎಂದರು. ಅಧ್ಯಕ್ಷತೆಯನ್ನು ವಾಯುವಿಹಾರಿಗಳ ಸಂಘದ ಪ್ರಕಾಶ ಬೆಲ್ಲದ್ ವಹಿಸಿ, ಮಾನವನಿಗೆ ಆರೋಗ್ಯ ಬಹಳ ಮುಖ್ಯವಾದದ್ದು. ಆರೋಗ್ಯದಲ್ಲಿ ನಿರ್ಲಕ್ಷ ವಹಿಸದೆ ಶುದ್ಧ ಜೀವನ ಪದ್ಧತಿಯನ್ನು ಅನುಸರಿಸೋಣ. ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆಯ ಬಗ್ಗೆ ತಿಳಿಸಿದರು.ಹಿರಿಯ ಕನ್ನಡ ಚಳುವಳಿಗಾರ ರಾಜಗೋಪಾಲ್ ಶುಭ ಹಾರೈಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಶಿವಲಿಂಗ ಮೂರ್ತಿ, ಹಾಜರಿದ್ದರು.

**ಜ್ಞಾನೇಶ್ ಕುಮಾರ್ ಬಂಧಿಸಲು ಜೆ.ಯೋಗೇಶ್ ಆಗ್ರಹ**

# ಮುಖ್ಯ ಚುನಾವಣಾ ಆಯುಕ್ತರ ಬಂಧಿಸುವಂತೆ ಒತ್ತಾಯ

ಚಾಮರಾಜನಗರ:ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ನಗರದಲ್ಲಿ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜೆ. ಯೋಗೇಶ್‌ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನ ಮುಂಭಾಗಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಚುನಾವಣಾ ಆಯುಕ್ತರ ಪ್ರತಿಕೃತಿ ಸುಡಲು ಮುಂದಾದಾಗ ಪೊಲೀಸರು, ಪ್ರತಿಭಟನಾನಿರತರು ನಡುವೆ ತಳ್ಳಾಟ, ನೂಕಾಟ ಉಂಟಾಯಿತು. ಪ್ರತಿಕೃತಿ ಪೊಲೀಸರ ವಶವಾಯಿತು. ನಂತರ ಪ್ರತಿಭಟನಾನಿರತರು ಚುನಾವಣಾ ಆಯುಕ್ತರ ಭಾವಚಿತ್ರ ಸುಟ್ಟು, ಚುನಾವಣಾ ಆಯುಕ್ತರ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ



ಜವರೇಗೌಡ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜೆ.ಯೋಗೇಶ್ ಮಾತನಾಡಿ, ರಾಜ್ಯದಲ್ಲಿ 70 ಸಾವಿರ ಮತದಾರರ ಹಕ್ಕು ರದ್ದತಿಗೆ ಕಾರಣರಾಗಿರುವ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿದರು.

ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಅವರ ಆದೇಶದಂತೆ. ದೇಶಾದ್ಯಂತ, ಕೆಪಿಸಿಸಿ ಅಧ್ಯಕ್ಷರಾದ ಹರಿಪ್ರಸಾದ್ ಬಿ.ಕೆ.ಹರಿಪ್ರಸಾದ್ ಅದೇಶದಂತೆ ರಾಜ್ಯಾದ್ಯಂತ ಪ್ರತಿಭಟನೆ ನಡೆಯುತ್ತಿದ್ದು, ಅದರಂತೆ ಚಾಮರಾಜನಗರ ಜಿಲ್ಲೆಯಲ್ಲೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ತೀರ್ಮಾನದಂತೆ ಎಸ್‌ಐಆರ್‌ನಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ. ರಾಜ್ಯದಲ್ಲಿ 70 ಲಕ್ಷಕ್ಕೂ ಮತದಾರರು ಅನ್ಯಾಯಕ್ಕೊಳಗಾಗಿದ್ದು, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಡಿಯಲ್ಲಿ ನೀಡಿದ ಮತದಾನದ ಹಕ್ಕನ್ನು ಕಳೆದುಕೊಂಡಿದ್ದಾರೆ. ಅಲ್ಲದೆ ದೇಶಾದ್ಯಂತ ಅನ್ಯಾಯವಾಗಿದೆ. ಆದರಿಂದ ಕೂಡಲೇ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ರಾಜೀನಾಮೆ ಪಡೆದ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ಮಾತನಾಡಿದರು. ಪ್ರತಿಭಟನೆಯಲ್ಲಿ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ನಾಗರತ್ನ ಕೆಂಕಾಕಿ, ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ, ಚೇತನ್ ದೊರ್ರೈರಾಜು, ಪತ್ರಿಕಾ ಕಾರ್ಯದರ್ಶಿ ಗೌಡಹಳ್ಳಿ ರಾಜೇಶ್, ಚಾಮರಾಜನಗರ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಅಕ್ಷಯ್, ಎನ್ ಎಸ್ ಯು ಐ ಜಿಲ್ಲಾಧ್ಯಕ್ಷ ಮೋಹನ್ ನಗು, ಸ್ವಾಮಿ, ದರ್ಶನ್, ಯರಿಯೂರು ಜಯಣ್ಣ, ವಡಗೆರೆ ಮಹದೇವಯ್ಯ, ಡಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಸಚಿನ್, ಮಂಗಲ ನವೀನ್, ನವೀನ್, ಎಪಿಎಂಪಿ ಮಾಜಿ ಅಧ್ಯಕ್ಷ ಸೋಮೇಶ್, ಶಶಾಂಕ್, ಪ್ರಸಾದ್, ಆನಂತ್, ಸೋಮಣ್ಣ, ರವಿಗೌಡ, ಶಕುಂತಲಾ, ಕಲಾವತಿ, ಕುಮಾರ್ ಇತರರು ಭಾಗವಹಿಸಿದ್ದರು.

## ಕಾನೂನು ತರಬೇತಿಗೆ 10 ಪದವೀಧರರ ಆಯ್ಕೆ




**ಮಂಡ್ಯ:** 2026–27ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಕಾನೂನು ಪದವೀಧರರಿಗೆ ನೀಡಲಾಗುವ ಕಾನೂನು ತರಬೇತಿಗೆ ಅರ್ಹತೆ ಹಾಗೂ ಸಂದರ್ಶನದ ಆಧಾರದ ಮೇಲೆ 10 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಕಾನೂನು ಪದವೀಧರರ ಆಯ್ಕೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾನೂನು ತರಬೇತಿಗೆ ಒಟ್ಟು 22 ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿದ್ದರು. ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆ, ನಿಗದಿತ ಮಾನದಂಡಗಳು ಹಾಗೂ ಸಂದರ್ಶನದಲ್ಲಿ ತೋರಿದ ಸಾಮರ್ಥ್ಯವನ್ನು ಪರಿಗಣಿಸಿ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ ಎಂದರು.

ನಿಯಮಾನುಸಾರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿ 10 ಕಾನೂನು ಪದವೀಧರರನ್ನು ತರಬೇತಿಗೆ ಆಯ್ಕೆ ಮಾಡಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ನಿಗದಿತ ಅವಧಿಯಲ್ಲಿ ಕಾನೂನು ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಾಯೋಗಿಕ ಹಾಗೂ ವೃತ್ತಿಪರ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಈ ತರಬೇತಿಯ ಮೂಲಕ ನ್ಯಾಯಾಂಗ ವ್ಯವಸ್ಥೆಯ ಕಾರ್ಯವಿಧಾನ, ಕಾನೂನು ಪ್ರಕ್ರಿಯೆಗಳು ಹಾಗೂ ವೃತ್ತಿಪರ ಕೌಶಲ್ಯಗಳ ಕುರಿತು ಅಭ್ಯರ್ಥಿಗಳಿಗೆ ಪ್ರಾಯೋಗಿಕ ಅನುಭವ ದೊರೆಯಲಿದೆ. ಕಾನೂನು ಕ್ಷೇತ್ರದಲ್ಲಿ ಅಗತ್ಯ ಜ್ಞಾನ ಮತ್ತು ಅನುಭವವನ್ನು ಗಳಿಸಿಕೊಳ್ಳಲು ತರಬೇತಿ ಸಹಕಾರಿಯಾಗಲಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ್ ಎಂ., ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಎಸ್. ಸತ್ಯಾನಂದ್, ಜಿಲ್ಲಾ ಸರ್ಕಾರಿ ವಕೀಲರಾದ ಉಮಾ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ದೀಪಕ್ ಕೆ.ಎಸ್. ಉಪಸ್ಥಿತರಿದ್ದರು.

# ಹೃದಯದ ಆರೋಗ್ಯಕ್ಕೆ ಜೀವನಶೈಲಿ ಬದಲಾವಣೆ ಅಗತ್ಯ: ಜಿಲ್ಲಾಧಿಕಾರಿ




ಮಂಡ್ಯ: ಇಲ್ಲಿನ ಸ್ಪಂದನ ಆಸ್ಪತ್ರೆ, ಕಾರ್ಡಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಚಾಪ್ಟರ್ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಮಂಡ್ಯ ಜಿಲ್ಲಾ ಶಾಖೆಯ ಸಂಯುಕ್ತ ಆಶ್ರಯದಲ್ಲಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವಿಶ್ವ ಹೃದಯ ದಿನಾಚರಣೆಯನ್ನು ಆಚರಿಸಲಾಯಿತು.

'ಯೂಸ್ ಹಾರ್ಟ್ ಟು ಆಕ್ಷನ್ ಡೋಂಟ್ ಮಿಸ್ ಎ ಬೀಟ್' ಎಂಬ ಧ್ಯೇಯದೊಂದಿಗೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕುಮಾರ ಇತ್ತೀಚಿನ ದಿನಗಳಲ್ಲಿ ಯುವಕರು ಹಾಗೂ ಚಿಕ್ಕ ಮಕ್ಕಳಲ್ಲಿಯೂ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು.

ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಮತ್ತು ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದರು. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಮತ್ತು ಪುರುಷರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿರುವುದಕ್ಕೆ ಬದಲಾದ ಜೀವನಶೈಲಿ, ದೈಹಿಕ ಚಟುವಟಿಕೆಗಳ ಕೊರತೆ, ಆಲಸ್ಯ ಹಾಗೂ ಆಹಾರ ಪದ್ಧತಿಯಲ್ಲಿನ ವ್ಯತ್ಯಾಸಗಳೇ ಪ್ರಮುಖ ಕಾರಣ ಎಂದು ಆತಂಕ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ.ಮೀರಾ ಶಿವಲಿಂಗಯ್ಯ ಅವರು ಮಾತನಾಡಿ ಮನಸ್ಸು ಮತ್ತು ಹೃದಯದ ಆರೋಗ್ಯವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ನಿಯಮಿತ ತರಬೇತಿ, ವ್ಯಾಯಾಮ, ವಾಕಿಂಗ್ ಮತ್ತು ಉತ್ತಮ ಆಹಾರ ಪದ್ಧತಿ ಅಗತ್ಯ ಎಂದು ಅವರು ಹೇಳಿದರು. ದುರಭ್ಯಾಸಗಳಿಂದ ದೂರವಿದ್ದು ಹೃದಯವನ್ನು ಆರೋಗ್ಯವಾಗಿಟ್ಟುಕೊಳ್ಳುವ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಅವರು ತಿಳಿಸಿದರು. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ ಎಂಬ ಅಕ್ಕಮಹಾದೇವಿಯವರ ವಚನವನ್ನು ಉಲ್ಲೇಖಿಸಿದ ಅವರು ದೇಹದ ಎಲ್ಲ ಚಟುವಟಿಕೆಗಳಿಗೂ ಮನಸ್ಸು ಮತ್ತು ಹೃದಯವೇ ಮೂಲ ಕಾರಣ ಎಂದು ವಿವರಿಸಿದರು.

ಸಮಾರಂಭದಲ್ಲಿ ತುರ್ತು ಸಂದರ್ಭದಲ್ಲಿ ಹೃದಯಾಘಾತ ಉಂಟಾದಾಗ ಪ್ರಾಣ ಉಳಿಸಲು ಸಿಪಿಆರ್ ಮಾಡುವ ಸರಳ ಮತ್ತು ಸರಿಯಾದ ವಿಧಾನವನ್ನು ಪ್ರಾತ್ಯಕ್ಷಿಕೆ ಮೂಲಕ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ವಿವರಿಸಿ ಕೊಡಲಾಯಿತು. ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮೂಲಕ ಮಾನವನ ಹೃದಯದ ಕಾರ್ಯವಿಧಾನ, ರಕ್ತ ಪರಿಚಲನೆ ಮತ್ತು ಹೃದಯ ಸಂಬಂಧಿ ತೊಂದರೆಗಳು ಉಂಟಾಗುವ ಬಗೆಯನ್ನು ವಿವರವಾಗಿ ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಸ್ಪಂದನ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಆದಿತ್ಯ ಗೌಡ, ಹೃದ್ರೋಗ ತಜ್ಞೆ ಡಾ.ಎಚ್.ಎಂ.ಹೇಮಾ, ಡಾ.ವೀನು, ಡಾ.ಸ್ಫೂರ್ತಿ, ಡಿಹೆಚ್‌ಒ ಬೆಟ್ಟಸ್ವಾಮಿ,ರಂಗಸ್ವಾಮಿ ಸೇರಿದಂತೆ ವೈದ್ಯರು ಮತ್ತು ವಿವಿಧ ನರ್ಸಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಹಾಜರಿದ್ದರು

## ಅರ್ಜಿ ಆಹ್ವಾನ

**ಮಡಿಕೇರಿ:** 2026–27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳಾದ ಉದ್ಯೋಗಿನಿ ಯೋಜನೆ, ಧನಶ್ರೀ ಯೋಜನೆ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಚೇತನ ಯೋಜನೆಗಳಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ಹತ್ತಿರದ ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ವೆಬ್‌ಸೈಟ್ https://kswdc.karnataka.gov.inರ ಮೂಲಕ ಅರ್ಜಿ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಅಕ್ಟೋಬರ್, 31 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಡಗು ಜಿಲ್ಲೆ ಹಾಗೂ ಜಿಲ್ಲಾ ಅಭಿವೃದ್ಧಿ ನಿರೀಕ್ಷಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಚೇರಿ, ಕೊಡಗು ಜಿಲ್ಲೆ ಇವರನ್ನು ಹಾಗೂ ದೂ.ಸಂ.08272–228010, 9482194105 ನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಸುಮಂಗಳ ಹಿರೇಮನಿ ಅವರು ತಿಳಿಸಿದ್ದಾರೆ.

## ಆಕ್ಷೇಪಣೆ ಸಲ್ಲಿಸಲು ಅವಕಾಶ

**ಮಡಿಕೇರಿ:** ಮಡಿಕೇರಿ ತಾಲ್ಲೂಕು ಸಂಪಾಜೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸುತ್ತಿರುವ 33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಸ್ಥಳದಲ್ಲಿರುವ ಮರಗಳನ್ನು ಕಡಿದು ತೆರವುಗೊಳಿಸುವ ಕುರಿತು ಈ ಕಾಮಗಾರಿ ಅಡಚಣೆಯಾದ 60 ಮರಗಳನ್ನು ಅರಣ್ಯ ಇಲಾಖಾ ವತಿಯಿಂದ ಕಡಿದು ಸರ್ಕಾರಿ ಮರ ಸಂಗ್ರಹಾಲಯಕ್ಕೆ ಸಾಗಿಸಲು ಕೋರಿರುತ್ತಾರೆ. ಆದ್ದರಿಂದ ಸಾರ್ವಜನಿಕರು ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಅಕ್ಟೋಬರ್, 03 ರೊಳಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ವಿಭಾಗ, ಮಡಿಕೇರಿ ಇವರಿಗೆ ಸಲ್ಲಿಸಬೇಕಾಗಿ ತಿಳಿಸಿದೆ. ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರು ತಿಳಿಸಿದ್ದಾರೆ. 2030ಕ್ಕೆ ಭಾರತದಲ್ಲಿ ಮಲೇರಿಯಾ ಮುಕ್ತ, ಕೊಡಗು ಜಿಲ್ಲೆಗೆ ಕೇಂದ್ರ ತನಿಖಾ ತಂಡ ಭೇಟಿ

2030ಕ್ಕೆ ದೇಶದಲ್ಲಿ ಮಲೇರಿಯಾ ರೋಗ ಪ್ರಕರಣವನ್ನು ಕೊನೆಗಾಣಿಸಲು ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದ್ದು ದೇಶಾದ್ಯಂತ ಆರೋಗ್ಯ ಸಂಸ್ಥೆಗಳಲ್ಲಿ ರೋಗ ಪ್ರಕರಣಗಳ ಚಿಕಿತ್ಸೆ ಅನುಸರಣೆ, ದಾಖಲಾತಿ ನಿರ್ವಹಣೆ ಪರಿಶೀಲಿಸಲು ಕೇಂದ್ರ ಪರಿಶೀಲನ ತಂಡ ಕೊಡಗು ಜಿಲ್ಲೆಗೆ ಭೇಟಿ ನೀಡಿ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್ ತಿಳಿಸಿದರು. ಕೊಡಗು ಜಿಲ್ಲೆಗೆ ಕಳೆದ 3 ದಿನಗಳಿಂದ ಸಬ್ ನ್ಯಾಷನಲ್ ಮಲೇರಿಯಾ ಎಲಿಮಿನೇಷನ್ ವ್ಯಾಲಿಡೇಶನ್ ರಾಷ್ಟ್ರೀಯ ತಂಡ ಸೋಮವಾರಪೇಟೆ ತಾಲ್ಲೂಕು ಆಸ್ಪತ್ರೆ, ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಆಲೂರು ಸಿದ್ದಾಪುರ, ಉಪಕೇಂದ್ರ ಸುಂಟಿಕೊಪ್ಪ, ಮತ್ತು ಮಡಿಕೇರಿ ತಾಲೂಕಿನ ನಗರ ಆರೋಗ್ಯ ಕೇಂದ್ರ ಹಾಗೂ ಜಿಲ್ಲಾ ಆಸ್ಪತ್ರೆ ಭೇಟಿ ನೀಡಿ ಮಲೇರಿಯಾ ಮುಕ್ತ ಮಾಡಲು ಕಳೆದ 5 ವರ್ಷಗಳಿಂದ ಅನುಸರಿಸಿರುವ ದಾಖಲಾತಿ ನಿರ್ವಹಣೆ ಮತ್ತು ರೋಗಿಗಳ ಚಿಕಿತ್ಸೆ ಅನುಸರಣೆ ಪರಿಶೀಲನೆ ನಡೆಸಿದರು. ಈ ತಂಡದ ನೇತೃತ್ವವನ್ನು ದೆಹಲಿಯ ಡಾಕ್ಟರ್ ಕಲ್ಪನಾ ಬರುವ ರವರ ನೇತೃತ್ವದಲ್ಲಿ ಪರಿಶೀಲನೆ ನಡೆಸಲಾಯಿತು.

ಇವರೊಂದಿಗೆ ಕೇಂದ್ರ ತಂಡದ ಡಾ.ಆರ್.ತೇನಾಂಬಿಗೈ, ಡಾ.ಬಿಜೀತ್ ಬಿಸ್ವಾ, ಡಾ.ಶ್ಯಾಮ್ ಬಂದು ರಾತ್ ಪರಿಶೀಲನೆ ನಡೆಸಿದರು. ಈ ವೇಳೆ ಜಿಲ್ಲಾ ಸರ್ವೇಕ್ಷಣ ಅಧಿಕಾರಿಗಳಾದ ಡಾ. ಶ್ರೀನಿವಾಸ್ ಬಿ.ಎಲ್ ಸೋಮವಾರಪೇಟೆ ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾಕ್ಟರ್ ಇಂದೂಧರ್, ಮಡಿಕೇರಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸುನಿಲ್, ಜಿಲ್ಲಾ ಎಂಟಮಾಲಿಜಿಸ್ಟ್ ಮಂಜುನಾಥ್, ಜಿಲ್ಲೆಯ ಎನ್‌ವಿಬಿಡಿಸಿಪಿ ತಂಡ ಹಾಗೂ ಎಲ್ಲಾ ಆರೋಗ್ಯ ಸಂಸ್ಥೆಯ ಅಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಮತ್ತು ಆರೋಗ್ಯ ಸಿಬ್ಬಂದಿಯವರು ಪರಿಶೀಲನೆ ವೇಳೆಯಲ್ಲಿ ಹಾಜರಿದ್ದರು. ಜಿಲ್ಲೆಯಲ್ಲಿ ಉತ್ತಮ ನಿರ್ವಹಣೆ ಮಾಡಲಾಗಿದ್ದು ಇತರೆ ಕೆಲವು ಸಣ್ಣಪುಟ್ಟ ನಿರ್ವಹಣೆ ಸರಿಪಡಿಸಿಕೊಳ್ಳಲು ಸಲಹೆ ನೀಡಿದರು. ಕೊನೆಯಲ್ಲಿ ಪರಿಶೀಲನೆ ತಂಡದವರಿಗೆ ಸರ್ವೇಕ್ಷಣಾ ಘಟಕದಿಂದ ಸನ್ಮಾನಿಸಿ ಗೌರವಿಸಲಾಯಿತು.

## ಅ.2ರಂದು ಶಿಕ್ಷಣ, ಕೃಷಿ ಹಾಗೂ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ–ಜಯಪ್ರಕಾಶಗೌಡ



**ಮಂಡ್ಯ:** ಕರ್ನಾಟಕ ಸಂಘದ ವತಿಯಿಂದ ಅ. 2 ರಂದು ಬಿ.ಹೆಚ್.ಮಂಗೇಗೌಡ ಶಿಕ್ಷಣ ಪ್ರಶಸ್ತಿ, ನಂಜಮ್ಮ ಮೋಟೇಗೌಡ ಕೃಷಿ ಪ್ರಶಸ್ತಿ, ಕೆ.ಟಿ.ಶ್ರೀಕಂಠೇಗೌಡ ಶಿಕ್ಷಕ ಪ್ರಶಸ್ತಿ ಹಾಗೂ ಕೆ.ಎಲ್. ಅರುಣ್ ಸ್ಮರಣಾರ್ಥ ವಿದ್ಯಾರ್ಥಿ ನಗದು ಪುರಸ್ಕಾರ ಪ್ರದಾನ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶಗೌಡ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಅ.2ರಂದು ಸಂಜೆ 4–30 ಕ್ಕೆ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆಯುವ ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಬಿ.ಜೆ.ವಿಜಯಕುಮಾರ್ ವಹಿಸಲಿದ್ದು ವಿಧಾನ ಪರಿಷತ್ ಶಾಸಕ ಕೆ.ಶಿವಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಅವರು ಹೇಳಿದರು.

ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ ಮತ್ತು ಗ್ರಾಮ ವಿದ್ಯಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬಿ.ಎಂ.ರಘು ಅವರು ಉಪಸ್ಥಿತರಿರಲಿದ್ದಾರೆ ಎಂದು ಅವರು ತಿಳಿಸಿದರು. ಬಿ.ಹೆಚ್.ಮಂಗೇಗೌಡ ಶಿಕ್ಷಣ ಪ್ರಶಸ್ತಿಯನ್ನು ಶ್ರೀ ಭೈರವೇಶ್ವರ ಗ್ರಾಮಾಂತರ ಶಿಕ್ಷಣ ಟ್ರಸ್ಟ್ ಪರವಾಗಿ ಸಂಸ್ಥಾಪಕ ಅಧ್ಯಕ್ಷ ಕೆ.ಬಿ.ಚಿಕ್ಕಬೈರೇಗೌಡ ಅವರಿಗೆ ನೀಡಲಾಗುವುದು ಎಂದು ಅವರು ಹೇಳಿದರು. ನಂಜಮ್ಮ ಮೋಟೇಗೌಡ ಕೃಷಿ ಪ್ರಶಸ್ತಿಯನ್ನು ಮಾರಗೌಡನಹಳ್ಳಿಯ ಪ್ರಗತಿಪರ ಕೃಷಿಕ ಶಿವಣ್ಣೇಗೌಡ ಅವರಿಗೆ ನೀಡಲಾಗುವುದು ಹಾಗೂ ಕೆ.ಟಿ.ಶ್ರೀಕಂಠೇಗೌಡ ಶಿಕ್ಷಕ ಪ್ರಶಸ್ತಿಯನ್ನು ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ವೈ.ಡಿ.ಕೃಷ್ಣಪ್ಪ ಅವರಿಗೆ ಪ್ರದಾನ ಮಾಡಲಾಗುವುದು ಎಂದು ಅವರು ವಿವರಿಸಿದರು.

ಕೆ.ಎಲ್.ಅರುಣ್ ಸ್ಮರಣಾರ್ಥ ವಿದ್ಯಾರ್ಥಿ ನಗದು ಪುರಸ್ಕಾರವನ್ನು ಕೊಪ್ಪದ ಬಾಲಕಿಯರ ಸ.ಪ.ಪೂ. ಕಾಲೇಜಿನ ವಿದ್ಯಾರ್ಥಿನಿಯರಾದ ರೋಹಿಣಿ ಡಿ., ಸೈಯದ್ ಹಾಜಿರಾ ಬಾನು, ನೂರ್ ತಸ್ಮಿಯಾ ಮತ್ತು ಸ್ವಾತಿ ಡಿ.ಸಿ. ಅವರಿಗೆ ನೀಡಲಾಗುವುದು ಎಂದು ಅವರು ಹೇಳಿದರು.

ಗೋಷ್ಠಿಯಲ್ಲಿ ಸಂಘದ ನಿರ್ದೇಶಕ ಹನಕೆರೆ ನಾಗಪ್ಪ ಉಪಸ್ಥಿತರಿದ್ದರು.

## ಭತ್ತದಲ್ಲಿ ಬೆಂಕಿ ರೋಗ ಮತ್ತು ಎಲೆ ಸುರುಳಿ ಹುಳುವಿನ ಭಾದೆ–ರೈತರಿಗೆ ಸಲಹೆ

**ಮಡಿಕೇರಿ:** ಭತ್ತವು, ಕೊಡಗು ಜಿಲ್ಲೆಯ ಬಹು ಮುಖ್ಯ ಆಹಾರ ಬೆಳೆಯಾಗಿದೆ. ಅಧಿಕ ಮಳೆ ಬೀಳುವ ಈ ಪ್ರದೇಶದಲ್ಲಿ ಭತ್ತದ ಬೆಳೆಯನ್ನು ಪರಂಪರಾಗತವಾಗಿ ಸಾಂಪ್ರದಾಯಿಕ ಪದ್ಧತಿಯಲ್ಲಿ ಬೆಳೆಯಲಾಗುತ್ತಿದೆ.

ದಶಕಗಳ ಹಿಂದೆ ಅನ್ನದ ಬಟ್ಟಲು ಎಂದು ಕರೆಯುತ್ತಿದ್ದ ಜಿಲ್ಲೆಯಲ್ಲಿ, ದಿನ ಕಳೆದಂತೆ ಹಲವಾರು ಕಾರಣಗಳಿಂದ ಭತ್ತದ ಬೆಳೆಯು ತನ್ನ ಪ್ರಾಮುಖ್ಯತೆ ಕಳೆದುಕೊಂಡು ಭತ್ತ ಬೆಳೆಯುವ ಪ್ರದೇಶವು ಗಣನೀಯವಾಗಿ ಕ್ಷೀಣಿಸುತ್ತಿದೆ. ಕೊಡಗಿನಲ್ಲಿ ಹುತ್ತರಿ ಹಬ್ಬವನ್ನು ಆಚರಿಸಲು ಬೇಕಾಗಿರುವ ಕದಿರನ್ನು ಸಹ ಭತ್ತ ಬೆಳೆದಿರುವ ಬೇರೆ ರೈತರಿಂದ ತಂದು ಆಚರಿಸುವ ಪರಿಸ್ಥಿತಿ ಇಂದಿನ ದಿನದಲ್ಲಿ ಸಹಜವಾಗಿ ಕಾಣಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ರೈತರು ವಾಣಿಜ್ಯ ಬೆಳೆ ಹೆಚ್ಚಾಗಿ ಬೆಳೆಯಲು ಆಸಕ್ತಿ ಹೊಂದುತ್ತಿದ್ದು ಭತ್ತ ಬೆಳೆಯುವ ಪ್ರದೇಶವು ಕಡಿಮೆಯಾಗುತ್ತಿದ್ದು, ಇಳುವರಿಯಲ್ಲಿ ಕೂಡ ಇಳಿಮುಖವಾಗಿರುವುದು ಕಂಡು ಬಂದಿದೆ.

ಕೊಡಗು ಜಿಲ್ಲೆಯಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ಭತ್ತದ ನಾಟಿ ಕಾರ್ಯ ಬಹುತೇಕ ಮುಗಿದಿದ್ದು, ನಾಟಿ ಮಾಡಿ 30 ರಿಂದ 40 ದಿನಗಳಾಗಿರುವ ಈ ಸಂದರ್ಭದಲ್ಲಿ ಗದ್ದೆಗಳಲ್ಲಿ ಬೆಂಕಿ ರೋಗ ಮತ್ತು ಎಲೆ ಸುರುಳಿ ಹುಳುವಿನ ಭಾದೆ ಜಿಲ್ಲೆಯ ಐದು ತಾಲ್ಲೂಕುಗಳಾದ ಮಡಿಕೇರಿ, ವಿರಾಜಪೇಟೆ, ಪೊನ್ನಂಪೇಟೆ, ಕುಶಾಲನಗರ ಮತ್ತು ಸೋಮವಾರಪೇಟೆಗಳಲ್ಲಿ ಕಾಣಿಸಿಕೊಂಡಿದೆ. ಇದರ ಹತೋಟಿಗೆ ಕೃಷಿ ವಿಜ್ಞಾನ ಕೇಂದ್ರ, ಗೋಣಿಕೊಪ್ಪಲು ಇವರ ಸಹಯೋಗದೊಂದಿಗೆ ಕೃಷಿ ಇಲಾಖೆ ಕೊಡಗು ಜಿಲ್ಲೆ ರೈತರಿಗೆ ಕೆಲವೊಂದು ಸಲಹೆ ನೀಡಿದ್ದಾರೆ.

**ಬೆಂಕಿ ರೋಗ:** ರೋಗದ ಲಕ್ಷಣಗಳು ಪ್ರಾರಂಭದಲ್ಲಿ ಎಲೆಗಳ ಮೇಲೆ ಕಂದು ಬಣ್ಣದ ಚುಕ್ಕೆಗಳು ಕಂಡು ಬರುತ್ತವೆ. ನಂತರ ಇಂತಹ ಚುಕ್ಕೆಗಳ ಗಾತ್ರ ಹೆಚ್ಚಾಗಿ ಗರಿಗಳ ಮೇಲೆ ಕದಿರಿನಾಕಾರದ ಮೊನಚಾದ ತುದಿಗಳುಳ್ಳ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಚುಕ್ಕೆಗಳ ಮಧ್ಯಭಾಗವು ಬೂದಿ ಬಣ್ಣಕ್ಕೆ ತಿರುಗಿ ಸುತ್ತಲು ಕಂದು ಬಣ್ಣದ್ದಾಗಿರುತ್ತದೆ. ಇಂತಹ ಚುಕ್ಕೆಗಳು ಒಂದಕ್ಕೊಂದು ಕೂಡಿಕೊಂಡು ಎಲೆಯು ಸುಟ್ಟು ಹೋದಂತೆ ಕಂಡುಬರುತ್ತದೆ.

ಹತೋಟಿ ವಿಧಾನಗಳು: ಗದ್ದೆಗಳಿಗೆ ಹೆಚ್ಚಿನ ಪ್ರಮಾಣದ ಯೂರಿಯ ಕೊಡಬಾರದು. ರೋಗದ ಬಾಧೆ ಇದ್ದಲ್ಲಿ ಶಿಲೀಂಧ್ರನಾಶಕಗಳಾದ ಟ್ರೈಪ್ಲೋಕ್ಸಿಸ್ಟ್ರೋಬಿನ್ +ಟೆಬುಕೋನೊಜೋಲ್ 0.5 ಗ್ರಾಂ ಅಥವಾ ಟ್ರೈಸೈಕ್ಲಜೋಲ್ 0.6 ಗ್ರಾಂ ಅಥವಾ ಅಜಾಕ್ಸಿಸ್ಟ್ರೋಬಿನ್ + ಡೈಫೆನ್ಕೋನೊಜೋಲ್ 1.0 ಮಿ.ಲಿ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪರಣೆ ಮಾಡಬೇಕು. ಸಿಂಪರಣೆ ಮಾಡುವಾಗ ಶಿಲೀಂದ್ರನಾಶಕಕ್ಕೆ ಅಂಟು ದ್ರಾವಣವನ್ನು ಸೇರಿಸಿ ಸಿಂಪಡಿಸುವುದು ಉತ್ತಮ.

**ಎಲೆ ಸುರುಳಿ ಹುಳು:** ಎಲೆ ಸುರುಳಿ ಹುಳುವಿನ ಬಾದೆ ಸಸಿ ಮಡಿಯಲ್ಲಿ ಮತ್ತು ನಾಟಿ ಮಾಡಿದ ಗದ್ದೆಗಳಲ್ಲಿ ಕಂಡು ಬಂದಿದ್ದರೆ, ಹುಳುಗಳು ಎಲೆಯ ಅಂಚನ್ನು ಮಡಚಿ ಸುರುಳಿ ಸುತ್ತಿಕೊಂಡು ಎಲೆಯ ಹಸಿರು ಭಾಗವನ್ನು ಕೆರೆದು ತಿನ್ನುತ್ತವೆ. ಇದರಿಂದ ಪೈರು ಬೆಳ್ಳಗೆ ಬಿಳಿಚಿ ಕೊಂಡಂತೆ ಕಾಣಿಸುತ್ತದೆ. ಬಾದೆಯು ತೀವ್ರವಾದಾಗ ಬೆಳವಣಿಗೆ ಕುಂಠಿತವಾಗಿ ತೆನೆ ಬರದೆ ನಷ್ಟವುಂಟಾಗುತ್ತದೆ. ಆದ್ದರಿಂದ ರೈತ ಬಾಂಧವರು ಈ ಕೀಟ ಬಾದೆಯ ಲಕ್ಷಣಗಳು ನಾಟಿ ಮಾಡಿದ ಗದ್ದೆಗಳಲ್ಲಿ ಕಂಡು ಬಂದಿದ್ದರೆ ಈ ಕ್ರಮಗಳನ್ನು ಕೂಡಲೆ ಅನುಸರಿಸಬೇಕು ಎಂದು ಕೃಷಿ ವಿಜ್ಞಾನ ಕೇಂದ್ರ ರೈತರಲ್ಲಿ ಮನವಿ ಮಾಡಿದೆ. ಮೋಡ ಕವಿದ ವಾತಾವರಣ, ತುಂತುರು ಮಳೆ ಹನಿ, ಬಿಟ್ಟು ಬಿಟ್ಟು ಬರುವ ಬಿಸಿಲು ಮತ್ತು ಮಳೆ ಈ ಎಲೆ ಸುರುಳಿ ಹುಳುವಿನ ಬಾದೆ ತೀವ್ರವಾಗಿ ಹರಡಲು ಕಾರಣಗಳಾಗುತ್ತವೆ.

ಪತಂಗವು ತಿಳಿ ಹಳದಿ ಬಣ್ಣ ಹೊಂದಿದ್ದು ರೆಕ್ಕೆಗಳ ಮೇಲೆ ತೆಳುವಾದ ಕಪ್ಪು ಅಡ್ಡ ಗೆರೆಗಳಿರುತ್ತವೆ. ಹೆಣ್ಣು ಪತಂಗ ಸುಮಾರು 300 ಮೊಟ್ಟೆಗಳನ್ನು ಎಲೆಯ ಮೇಲೆ ಮಧ್ಯದ ನರಕ್ಕೆ ಸಮಾನಾಂತರ ರೇಖೆಯಲ್ಲಿ ಇಡುತ್ತದೆ. 4 ರಿಂದ 7 ದಿನಗಳಲ್ಲಿ ಮೊಟ್ಟೆಯಿಂದ ಮರಿಗಳು ಹೊರಬಂದು 15 ರಿಂದ 27 ದಿನಗಳವರೆಗೆ ಎಲೆಯನ್ನು ಕೆರೆದು ತಿನ್ನುತ್ತಾ ಬೆಳೆದು ಕೋಶಾವಸ್ಥೆಯನ್ನು ಸೇರುತ್ತವೆ. ಆರರಿಂದ ಎಂಟು ದಿನಗಳವರೆಗೆ ಕೋಶಾವಸ್ಥೆಯಲ್ಲಿದ್ದು ತದನಂತರ ಪ್ರೌಢಕೀಟವು ಹೊರ ಬರುತ್ತದೆ. ಹತೋಟಿ ವಿಧಾನಗಳು: ಇದರ ಹತೋಟಿಗೆ ಗದ್ದೆಯ ಬದುವಿನಲ್ಲಿರುವ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಬೇಕು. ಶಿಫಾರಸ್ಸು ಮಾಡಿರುವಷ್ಟು ಮಾತ್ರ ಸಾರಜನಕ ಗೊಬ್ಬರವನ್ನು ಕೊಡಬೇಕು.

## ಅಪೌಷ್ಟಿಕತೆ ಮತ್ತು ರಕ್ತಹೀನತೆ ತಡೆಗಟ್ಟಲು ಪೌಷ್ಟಿಕ ಆಹಾರ ಸಹಕಾರಿ

**ಮಡಿಕೇರಿ:** ಪೋಷಣ್ ಮಾಸಾಚರಣೆಯ ಅಂಗವಾಗಿ ಕಾನ್ವೆಂಟ್ ಜಂಕ್ಷನ್ ಅಂಗನವಾಡಿ ಕೇಂದ್ರದಲ್ಲಿ ಅಪೌಷ್ಟಿಕತೆ, ರಕ್ತಹೀನತೆ ಹಾಗೂ ಇಲಾಖೆಯ ವಿವಿಧ ಯೋಜನೆಗಳ ಕುರಿತು ಅರಿವು ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹೇಶ್ ಅವರು, ಮಕ್ಕಳಲ್ಲಿ ಹಾಗೂ ಮಹಿಳೆಯರಲ್ಲಿ ಹೆಚ್ಚುತ್ತಿರುವ ಅಪೌಷ್ಟಿಕತೆ ಮತ್ತು ರಕ್ತಹೀನತೆಯನ್ನು ತಡೆಗಟ್ಟಲು ಸಮತೋಲನ ಆಹಾರ ಸೇವನೆ ಅತ್ಯಗತ್ಯ ಎಂದರು.

ಸಿರಿಧಾನ್ಯಗಳು, ಸ್ಥಳೀಯವಾಗಿ ದೊರೆಯುವ ಹಣ್ಣುಗಳು, ಸೊಪ್ಪುಗಳು, ವಿಶೇಷವಾಗಿ ನುಗ್ಗೆ ಸೊಪ್ಪು ಹಾಗೂ ವಿವಿಧ ತರಕಾರಿಗಳನ್ನು ಪ್ರತಿನಿತ್ಯದ ಆಹಾರದಲ್ಲಿ ಬಳಸುವಂತೆ ಕರೆ ನೀಡಿದರು.

ಮಕ್ಕಳಲ್ಲಿ ಜಂತುಹುಳುವಿನ ಬಾಧೆಯಿಂದಲೂ ಅಪೌಷ್ಟಿಕತೆ ಉಂಟಾಗುವ ಸಾಧ್ಯತೆ ಇದ್ದು, ಆರೋಗ್ಯ ಇಲಾಖೆಯ ಮಾರ್ಗದರ್ಶನದಂತೆ ಆರು ತಿಂಗಳಿಗೊಮ್ಮೆ ಜಂತುಹುಳು ನಿವಾರಕ ಮಾತ್ರೆಗಳನ್ನು ನೀಡುವ ಮೂಲಕ ಮಕ್ಕಳ ಆರೋಗ್ಯವನ್ನು ಕಾಪಾಡಬೇಕು ಎಂದು ತಿಳಿಸಿದರು.

ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೇಪಾಡಂಡ ಸವಿತಾ ಕೀರ್ತನ್ ಅವರು ಮಾತನಾಡಿ, ಮಹಿಳೆಯರು ಮತ್ತು ಮಕ್ಕಳ ಮಾರಾಟ, ಬಾಲ್ಯವಿವಾಹ ಹಾಗೂ ಬಾಲ ಗರ್ಭಿಣಿಯಂತಹ ಸಾಮಾಜಿಕ ಪಿಡುಗುಗಳ ಕುರಿತು ಅರಿವು ಮೂಡಿಸಿದರು. ಅಲ್ಲದೆ, ಗೃಹಲಕ್ಷ್ಮಿ ಯೋಜನೆಯ ಮರುಪರಿಶೀಲನೆಗೆ ಫಲಾನುಭವಿಗಳು ದೂರವಾಣಿ ಸಂಖ್ಯೆ ಹೊಂದಿರುವ ಆಧಾರ್ ಕಾರ್ಡ್, ಸಾಲರಹಿತ ಬ್ಯಾಂಕ್ ಖಾತೆ, ರೇಷನ್ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿಯನ್ನು ಸರಿಪಡಿಸಿಕೊಂಡು ಅಗತ್ಯ ದಾಖಲೆಗಳೊಂದಿಗೆ ಸಹಕರಿಸುವಂತೆ ತಿಳಿಸಿದರು.

"ಬಣ್ಣ ಬಣ್ಣದ ತರಕಾರಿಗಳನ್ನು ತಿನ್ನದಿದ್ದರೆ, ಬಣ್ಣ ಬಣ್ಣದ ಮಾತ್ರೆಗಳನ್ನು ತಿನ್ನಬೇಕಾಗುತ್ತದೆ" ಎಂಬ ಸಂದೇಶವನ್ನು ಹೂವಿನ ರಂಗೋಲಿಯ ಮೂಲಕ ಪ್ರದರ್ಶಿಸಿ ಫಲಾನುಭವಿಗಳ ಗಮನ ಸೆಳೆಯಲಾಯಿತು.

ಕಾರ್ಯಕ್ರಮದಲ್ಲಿ ಗರ್ಭಿಣಿಯರು, ಬಾಣಂತಿಯರು ಹಾಗೂ ಕಸಬಾ ವೃತ್ತದ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಪಾರಿಜಾತ ನೆರವೇರಿಸಿದರು. ಇಂದಿರಾ ಸ್ವಾಗತಿಸಿದರು. ಮುತ್ತಮ್ಮ ನಿರೂಪಿಸಿದರು. ಸುಜಾತಾ ವಂದಿಸಿದರು.

## ಅ.1ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ




**ಮಂಡ್ಯ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಹಾಗೂ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ?2026 ಕಾರ್ಯಕ್ರಮವನ್ನು ಅಕ್ಟೋಬರ್ 1ರಂದು ಬೆಳಿಗ್ಗೆ 10.30ಕ್ಕೆ ನಗರದ ಗಾಂಧಿ ಭವನದಲ್ಲಿ ಆಯೋಜಿಸಲಾಗಿದೆ.

ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದು, ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಹಾಗೂ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷ ಡಾ. ಮೂರ್ತಿ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ. ರವಿಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

**ಮುಖ್ಯ ಅತಿಥಿಗಳು:** ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್. ಆತ್ಮಾನಂದ, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷ ಸಿ.ಡಿ. ಗಂಗಾಧರ, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ. ನಾಗೇಂದ್ರ ಕುಮಾರ್, ವಿಧಾನಪರಿಷತ್ ಸದಸ್ಯರಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಬಿ.ಎಸ್. ಶಿವಣ್ಣ, ವಿಧಾನಸಭಾ ಸದಸ್ಯರಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ. ಮಂಜು ಹಾಗೂ ಕೆ.ಎಂ. ಉದಯ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ. ಹೆಚ್. ಕೃಷ್ಣ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ. ಪ್ರಕಾಶ್ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ವಿಜಯಲಕ್ಷ್ಮಿ ರಘುನಂದನ್ ಅವರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರು: ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್. ನಂದಿನಿ, ಪೊಲೀಸ್ ಅಧೀಕ್ಷಕಿ ಡಾ. ಶೋಭಾರಾಣಿ ವಿ.ಜೆ., ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ಮಂಡ್ಯ ಉಪವಿಭಾಗಾಧಿಕಾರಿ ಎಂ. ಶಿವಮೂರ್ತಿ, ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷ ಮೀರಾಶಿವಲಿಂಗಯ್ಯ ಅವರು ಉಪಸ್ಥಿತರಿರಲಿದ್ದಾರೆ.

## ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ

### ವಿಚಾರಣೆಗೆ ಬಾಕಿ ಇರುವ ಮತದಾರರ ಮನೆ ಮನೆಗೆ ಬಿಎಲ್‌ಒಗಳು ಭೇಟಿ; ಜಿಲ್ಲಾಧಿಕಾರಿ

**ಮಡಿಕೇರಿ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಜಿಲ್ಲೆಯಲ್ಲಿ ಈಗಾಗಲೇ ಮ್ಯಾಪಿಂಗ್ ಆಗದಿರುವ, ಮ್ಯಾಪಿಂಗ್‌ನಲ್ಲಿ ವ್ಯತ್ಯಾಸವಾಗಿದ್ದ ಸುಮಾರು 58,883 ಮತದಾರರಲ್ಲಿ, 44,444 ಮಂದಿಯ ಮಾಹಿತಿ ಪಡೆದು ವಿಚಾರಣೆ ಪೂರ್ಣಗೊಳಿಸಲಾಗಿದೆ. ಉಳಿದಂತೆ 14,439 ಮಂದಿ ಮತದಾರರ ಮನೆ ಮನೆಗೆ ಬಿಎಲ್‌ಒಗಳು ಭೇಟಿ ನೀಡಿ ದಾಖಲೆಗಳನ್ನು ಪಡೆದು ಇಸಿಐ ನೆಟ್‌ನಲ್ಲಿ ಅಪ್‌ಲೋಡ್ ಮಾಡಲಿದ್ದಾರೆ ಎಂದು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ರಾಜಕೀಯ ಪಕ್ಷಗಳ ಪ್ರಮುಖರೊಂದಿಗೆ ಸೋಮವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಈಗಾಗಲೇ ಮ್ಯಾಪಿಂಗ್‌ನಲ್ಲಿ ವ್ಯತ್ಯಾಸ ಆಗಿರುವ ಸಂಬಂಧ ಪರಿಶೀಲನಾ ಕಾರ್ಯವು ನಡೆಯುತ್ತಿದ್ದು, ಬಾಕಿ ಇರುವ ಮತದಾರರ ಮನೆ ಮನೆಗೆ ಬಿಎಲ್‌ಒಗಳು ಭೇಟಿ ನೀಡಿ ಮಾಹಿತಿ ಪಡೆಯಲಿದ್ದು, ಈ ಅವಕಾಶವನ್ನು ಪಡೆದುಕೊಳ್ಳುವಂತಾಗಬೇಕು. ಆ ನಿಟ್ಟಿನಲ್ಲಿ ವಿವಿಧ ರಾಜಕೀಯ ಪಕ್ಷಗಳು ಸಹಕರಿಸುವಂತೆ ಜಿಲ್ಲಾಧಿಕಾರಿ ಅವರು ಕೋರಿದರು.

ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಸಂಬಂಧ ವಿಶೇಷ ಅಭಿಯಾನವು ಆಗಸ್ಟ್, 29 ಮತ್ತು 30 ರಂದು, ಹಾಗೆಯೇ ಸೆಪ್ಟೆಂಬರ್, 19 ಮತ್ತು 20 ರಂದು ನಡೆದಿದ್ದು, ಆ ಸಂದರ್ಭದಲ್ಲಿಯೂ ಸಹ ನಮೂನೆ–6, 07 ಮತ್ತು 8 ರಲ್ಲಿ ಅರ್ಜಿ ಸಲ್ಲಿಸಿ ಮತದಾರರ ಪಟ್ಟಿಗೆ ಪರಿಷ್ಕರಣಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ ಎಂದು ಜಿಲ್ಲಾಧಿಕಾರಿ ಅವರು ಹೇಳಿದರು.

ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಸಂಬಂಧ ಆಗಸ್ಟ್, 29 ಮತ್ತು 30 ರಂದು ನಡೆದ ವಿಶೇಷ ಅಭಿಯಾನ ಸಂದರ್ಭದಲ್ಲಿ ನಮೂನೆ 6 ರಡಿ 398 ಅರ್ಜಿಗಳು ಸಲ್ಲಿಕೆಯಾಗಿದ್ದವು, ನಮೂನೆ–7 ಮತ್ತು 8 ರಡಿ 247 ಒಟ್ಟು 652 ಅರ್ಜಿಗಳು ಸಲ್ಲಿಕೆಯಾಗಿದ್ದವು ಎಂದು ಮಾಹಿತಿ ನೀಡಿದರು.

ಹಾಗೆಯೇ ಸೆಪ್ಟೆಂಬರ್, 19 ಮತ್ತು 20 ರಂದು ನಡೆದ ವಿಶೇಷ ಅಭಿಯಾನ ಸಂದರ್ಭದಲ್ಲಿ ನಮೂನೆ–6 ರಡಿ 507 ಅರ್ಜಿಗಳು ಸಲ್ಲಿಕೆಯಾಗಿದ್ದವು, ನಮೂನೆ 7 ರಡಿ 5 ಮತ್ತು ನಮೂನೆ 8 ರಡಿ 462 ಒಟ್ಟು 954 ಅರ್ಜಿಗಳು ಸಲ್ಲಿಕೆಯಾಗಿದ್ದವು ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು.

2026ರ ಅಕ್ಟೋಬರ್, 01 ಅರ್ಹತಾ ದಿನಾಂಕವಾಗಿದ್ದು, ಕರಡು ಮತದಾರರ ಪಟ್ಟಿಯ ಪ್ರಕಟಣೆ ದಿನದಿಂದ(2026 ರ ಆಗಸ್ಟ್, 24 ರಿಂದ ಸೆಪ್ಟೆಂಬರ್, 23 ರವರೆಗೆ) ನಮೂನೆಯನ್ನು ಸ್ವೀಕರಿಸಲಾಗಿದ್ದು, ನಮೂನೆ 6 ರಡಿ 2388, ನಮೂನೆ 7 ರಡಿ 26, ನಮೂನೆ 8 ರಡಿ 3224 ಅರ್ಜಿಗಳು ಸ್ವೀಕರಿಸಲಾಗಿದ್ದು, ಒಟ್ಟು 5,638 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದರು.

2026 ರ ಆಗಸ್ಟ್, 24 ರಂದು ಪ್ರಕಟಿಸಿದ ಕರಡು ಮತದಾರರ ಪಟ್ಟಿಯಂತೆ ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರದಲ್ಲಿ 567 ಮತಗಟ್ಟೆಗಳಿದ್ದು, 4,05,803 ಮತದಾರರು ಇದ್ದು, ಇವರಲ್ಲಿ 1,98,294 ಪುರುಷ, 2,07,505 ಮಹಿಳಾ ಮತದಾರರು ಮತ್ತು 4 ಇತರೆ ಮತದಾರರು ಇದ್ದಾರೆ ಎಂದು ವಿವರಿಸಿದರು.

ಒಟ್ಟಾರೆ ಜಿಲ್ಲೆಯ ಸಮಗ್ರ ಅಂತಿಮ ಮತದಾರರ ಪಟ್ಟಿಯು ಇದೇ ಅಕ್ಟೋಬರ್, 27 ರಂದು ಪ್ರಕಟಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಅವರು ಮಾಹಿತಿ ನೀಡಿದರು. ಭಾರತೀಯ ಕಾಂಗ್ರೆಸ್ ಪಕ್ಷದ ಪ್ರತಿನಿಧಿ ತೆನ್ನಿರಾ ಮೈನಾ ಅವರು ಮಾತನಾಡಿ ಎಸ್‌ಐಆರ್ ಪ್ರಕ್ರಿಯೆ ಸರಿ ಇದ್ದರೂ ಸಹ, ಹಿರಿಯ ನಾಗರಿಕರಿಗೆ ನೋಟೀಸ್ ನೀಡಿ ಒಂದು ರೀತಿ ಮುಜುಗರ ಉಂಟು ಮಾಡಿರುವುದು ಸಮರ್ಥನೀಯವಲ್ಲ ಎಂದು ಪ್ರತಿಪಾದಿಸಿದರು.

ಭಾರತೀಯ ಜನತಾ ಪಕ್ಷದ ಪ್ರತಿನಿಧಿ ಸಜಿಲ್ ಕೃಷ್ಣ ಅವರು ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆ ಸುಗಮವಾಗಿ ನಡೆಯುವಲ್ಲಿ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಮತದಾರರ ಪಟ್ಟಿಯಲ್ಲಿ ಅರ್ಹರ ಹೆಸರು ಬಿಟ್ಟುಹೋಗದಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿ ಎಂದರು.

# ಗುಣಮಟ್ಟದ ಉಚಿತ ಶಿಕ್ಷಣ, ಆರೋಗ್ಯ ಸೇವೆ; ಬಡವರ ಬದುಕಿಗೆ ಆರ್ಥಿಕ ಬಲ!



ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಬಡತನವೆಂದರೆ ಕೇವಲ ಹಣದ ಕೊರತೆಯಲ್ಲ. ಅದು ಅವಕಾಶಗಳ ಕೊರತೆ, ಉತ್ತಮ ಶಿಕ್ಷಣದಿಂದ ದೂರ ಉಳಿಯುವ ಅನಿವಾರ್ಯತೆ, ಅನಾರೋಗ್ಯ ಬಂದಾಗ ಚಿಕಿತ್ಸೆಯ ವೆಚ್ಚ ಭರಿಸಲಾಗದ ಅಸಹಾಯಕತೆ ಮತ್ತು ಭವಿಷ್ಯದ ಬಗ್ಗೆ ಕಾಡುವ ಆತಂಕವೂ ಹೌದು. ಒಂದು ಕುಟುಂಬದ ಕೈಯಲ್ಲಿ ಹಣವಿಲ್ಲದಿದ್ದರೆ ಅದರ ಪರಿಣಾಮ ಮನೆಯ ಇಂದಿನ ಬದುಕಿಗಷ್ಟೇ ಸೀಮಿತವಾಗುವುದಿಲ್ಲ; ಮಕ್ಕಳ ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಮುಂದಿನ ಪೀಳಿಗೆಯ ಭವಿಷ್ಯದ ಮೇಲೂ ಅದರ ನೆರಳು ಬೀಳುತ್ತದೆ. ಆದ್ದರಿಂದ ಬಡವರ ಬದುಕನ್ನು ಆರ್ಥಿಕವಾಗಿ ಸದೃಢಗೊಳಿಸಲು ಕೇವಲ ಹಣದ ನೆರವಿಗಿಂತ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೇವೆ ಎಲ್ಲರಿಗೂ ದೊರೆಯುವಂತಾಗಬೇಕು.

ಬಡ ಕುಟುಂಬದ ಮಗುವಿಗೆ ಉತ್ತಮ ಶಿಕ್ಷಣ ಉಚಿತವಾಗಿ ದೊರೆತರೆ, ಅದು ಕೇವಲ ಒಂದು ಮಗುವಿನ ಬದುಕನ್ನಷ್ಟೇ ಬದಲಿಸುವುದಿಲ್ಲ; ಇಡೀ ಕುಟುಂಬದ ಭವಿಷ್ಯದ ದಿಕ್ಕನ್ನೇ ಬದಲಿಸಬಲ್ಲದು. ಇಂದು ಶಾಲೆಯ ಮೆಟ್ಟಿಲೇರುವ ಮಗು ನಾಳೆ ವೈದ್ಯ, ಎಂಜಿನಿಯರ್, ಶಿಕ್ಷಕ, ವಿಜ್ಞಾನಿ, ಉದ್ಯಮಿ ಅಥವಾ ಕೌಶಲ್ಯ ಹೊಂದಿದ ವೃತ್ತಿಪರನಾಗಬಹುದು. ಶಿಕ್ಷಣವೆಂದರೆ ಕೇವಲ ಅಕ್ಷರಜ್ಞಾನವಲ್ಲ; ಅದು ಆತ್ಮವಿಶ್ವಾಸ, ಚಿಂತನಾ ಶಕ್ತಿ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಸ್ವಾವಲಂಬನೆಯ ದಾರಿಯನ್ನು ತೋರಿಸುವ ಶಕ್ತಿ.

ಬಡತನದ ಒಂದು ಚಕ್ರ ಹೀಗಿದೆ?ಹಣವಿಲ್ಲ, ಉತ್ತಮ ಶಿಕ್ಷಣವಿಲ್ಲ; ಶಿಕ್ಷಣವಿಲ್ಲ, ಉತ್ತಮ ಉದ್ಯೋಗವಿಲ್ಲ; ಉದ್ಯೋಗವಿಲ್ಲ, ಆದಾಯ ಕಡಿಮೆ; ಆದಾಯ ಕಡಿಮೆ, ಮತ್ತೆ ಬಡತನ. ಈ ಚಕ್ರವನ್ನು ಮುರಿಯಲು ಶಿಕ್ಷಣವೇ ಪ್ರಮುಖ ಸಾಧನ. ಶಾಲಾ ಶುಲ್ಕ, ಪುಸ್ತಕ, ಸಮವಸ್ತ್ರ, ಸಾರಿಗೆ ಮತ್ತು ಇತರ ವೆಚ್ಚಗಳು ಬಡ ಕುಟುಂಬಗಳಿಗೆ ಹೊರೆಯಾಗದಿದ್ದರೆ, ಮಕ್ಕಳನ್ನು ಶಾಲೆಯಿಂದ ಹೊರತೆಗೆದು ಕೆಲಸಕ್ಕೆ ಕಳುಹಿಸುವ ಅನಿವಾರ್ಯತೆಯೂ ಕಡಿಮೆಯಾಗುತ್ತದೆ.

ಆದರೆ ಉಚಿತ ಶಿಕ್ಷಣ ಎಂದರೆ ಕೇವಲ ಶುಲ್ಕವಿಲ್ಲದ ಶಿಕ್ಷಣವಲ್ಲ. ಗುಣಮಟ್ಟದ ಶಿಕ್ಷಕರು, ಉತ್ತಮ ತರಗತಿಗಳು, ಗ್ರಂಥಾಲಯ, ಪ್ರಯೋಗಾಲಯ, ಡಿಜಿಟಲ್ ಸೌಲಭ್ಯ, ಕೌಶಲ್ಯ ತರಬೇತಿ ಮತ್ತು ಉದ್ಯೋಗ ಮಾರ್ಗದರ್ಶನವೂ ಅದರ ಭಾಗವಾಗಬೇಕು. ಇಂದಿನ ತಂತ್ರಜ್ಞಾನ ಯುಗದಲ್ಲಿ ಕಂಪ್ಯೂಟರ್, ಇಂಗ್ಲಿಷ್, ವಿಜ್ಞಾನ, ಗಣಿತ, ಡಿಜಿಟಲ್ ಕೌಶಲ್ಯ ಮತ್ತು ಕೃತಕ ಬುದ್ಧಿಮತ್ತೆಯಂತಹ ಕ್ಷೇತ್ರಗಳ ಪರಿಚಯ ಬಡ ಮಕ್ಕಳಿಗೂ ದೊರೆಯಬೇಕು. ಪ್ರತಿಭೆ ಬಡತನದ ಕಾರಣಕ್ಕೆ ಮಣ್ಣಾಗಬಾರದು.

ಶಿಕ್ಷಣದಷ್ಟೇ ಆರೋಗ್ಯವೂ ಮುಖ್ಯ. ಕುಟುಂಬದ ದುಡಿಯುವ ವ್ಯಕ್ತಿಗೆ ಅನಾರೋಗ್ಯ ಬಂದರೆ ಆದಾಯ ನಿಲ್ಲಬಹುದು. ಗಂಭೀರ ಕಾಯಿಲೆ ಎದುರಾದಾಗ ವರ್ಷಗಳ ಉಳಿತಾಯ ಕ್ಷಣಾರ್ಧದಲ್ಲಿ ಕರಗಬಹುದು; ಕೆಲವೊಮ್ಮೆ ಸಾಲದ ಸುಳಿಗೂ ಸಿಲುಕಬೇಕಾಗುತ್ತದೆ. ಹೀಗಾಗಿ ಗುಣಮಟ್ಟದ ಆರೋಗ್ಯ ಸೇವೆ ಬಡವರ ಪಾಲಿಗೆ ಕೇವಲ ವೈದ್ಯಕೀಯ ಸೌಲಭ್ಯವಲ್ಲ; ಅದು ಆರ್ಥಿಕ ರಕ್ಷಣೆಯ ಕವಚ.

ಸಮಯಕ್ಕೆ ಸರಿಯಾಗಿ ಚಿಕಿತ್ಸೆ, ಉಚಿತ ಅಥವಾ ಕೈಗೆಟುಕುವ ದರದ ಔಷಧಿ, ಅಗತ್ಯ ಪರೀಕ್ಷೆಗಳು, ತುರ್ತು ಚಿಕಿತ್ಸೆ ಹಾಗೂ ಉತ್ತಮ ಆಸ್ಪತ್ರೆಗಳು ದೊರೆತರೆ ಕುಟುಂಬಗಳು ಅನಾರೋಗ್ಯದ ಹೊರೆಗಿಂತಲೂ ದೊಡ್ಡ ಆರ್ಥಿಕ ಸಂಕಷ್ಟದಿಂದ ಪಾರಾಗಬಹುದು. ಆರೋಗ್ಯವಂತ ವ್ಯಕ್ತಿಯೇ ನಿರಂತರವಾಗಿ ಕೆಲಸ ಮಾಡಿ ಆದಾಯ ಗಳಿಸಬಲ್ಲನು. ಆದ್ದರಿಂದ ಆರೋಗ್ಯ ಕ್ಷೇತ್ರಕ್ಕೆ ಮಾಡುವ ಹೂಡಿಕೆ ಜನರ ಬದುಕಿನ ಮೇಲಿನ ಹೂಡಿಕೆಯಾಗಿದೆ.

ಇಲ್ಲಿ ಒಂದು ಸಂಗತಿ ಮರೆಯಬಾರದು?ಉಚಿತ ಸೇವೆ ಎಂದರೆ ಕಳಪೆ ಸೇವೆ ಎಂದರ್ಥವಾಗಬಾರದು. ಬಡವರಿಗೆ ದೊರೆಯುವ ಶಾಲೆ ಮತ್ತು ಆಸ್ಪತ್ರೆಗಳ ಗುಣಮಟ್ಟವೂ ಉತ್ತಮವಾಗಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿಯೂ ವೈದ್ಯರು, ನರ್ಸ್‌ಗಳು, ಔಷಧಿ, ತಪಾಸಣಾ ಸೌಲಭ್ಯ, ಉತ್ತಮ ಶಾಲೆಗಳು ಮತ್ತು ತರಬೇತಿ ಕೇಂದ್ರಗಳು ಸಮರ್ಪಕವಾಗಿ ಲಭ್ಯವಾಗಬೇಕು. ಹಳ್ಳಿಯ ಮಗುವಿಗೂ ನಗರದ ಮಗುವಿನಷ್ಟೇ ಕನಸು ಕಾಣುವ ಹಕ್ಕಿದೆ. ಬಡತನ ನಿವಾರಣೆಗೆ ಹಣದ ನೆರವು ಕೆಲವೊಮ್ಮೆ ಅಗತ್ಯ. ಆದರೆ ಹಣದ ಸಹಾಯ ಮಾತ್ರ ಶಾಶ್ವತ ಪರಿಹಾರವಲ್ಲ. ಶಿಕ್ಷಣ ವ್ಯಕ್ತಿಗೆ ಭವಿಷ್ಯದಲ್ಲಿ ಆದಾಯ ಗಳಿಸುವ ಸಾಮರ್ಥ್ಯ ನೀಡುತ್ತದೆ. ಆರೋಗ್ಯ ಆ ಆದಾಯವನ್ನು ಅನಾರೋಗ್ಯದ ವೆಚ್ಚದಲ್ಲಿ ಕಳೆದುಕೊಳ್ಳದಂತೆ ರಕ್ಷಿಸುತ್ತದೆ. ಕೌಶಲ್ಯ ಉದ್ಯೋಗದ ಬಾಗಿಲು ತೆರೆಯುತ್ತದೆ. ಉದ್ಯೋಗ ಸ್ವಾವಲಂಬನೆಯ ದಾರಿಯನ್ನು ನಿರ್ಮಿಸುತ್ತದೆ.

ಹೀಗಾಗಿ ಶಿಕ್ಷಣ, ಆರೋಗ್ಯ, ಕೌಶಲ್ಯ ಮತ್ತು ಉದ್ಯೋಗ?ಈ ನಾಲ್ಕು ಕಂಬಗಳ ಮೇಲೆ ಬಡ ಕುಟುಂಬಗಳ ಆರ್ಥಿಕ ಭದ್ರತೆಯನ್ನು ಕಟ್ಟಬೇಕಾಗಿದೆ. ಸಮಾಜದ ಅಭಿವೃದ್ಧಿಯನ್ನು ಕೇವಲ ದೊಡ್ಡ ಕಟ್ಟಡಗಳು, ರಸ್ತೆಗಳು ಅಥವಾ ಆರ್ಥಿಕ ಬೆಳವಣಿಗೆಯ ಅಂಕಿ-ಅಂಶಗಳಿಂದ ಅಳೆಯಲಾಗದು. ಒಂದು ಬಡ ಕುಟುಂಬದ ಮಗು ಶಿಕ್ಷಣ ಪಡೆದು ಸ್ವಾವಲಂಬಿಯಾದಾಗ, ಒಂದು ಕುಟುಂಬ ಅನಾರೋಗ್ಯದ ಕಾರಣ ಸಾಲದ ಸುಳಿಗೆ ಬೀಳದೆ ಉಳಿದಾಗ, ಒಂದು ಗ್ರಾಮದಲ್ಲಿ ಆರೋಗ್ಯ ಸೇವೆ ಜನರ ಕೈಗೆಟುಕಿದಾಗ?ಅಲ್ಲಿಯೇ ನಿಜವಾದ ಅಭಿವೃದ್ಧಿಯ ಅರ್ಥ ಗೋಚರಿಸುತ್ತದೆ. ಬಡವರಿಗೆ ದಯೆಗಿಂತ ಅವಕಾಶ ಬೇಕು; ನೆರವಿಗಿಂತ ಸ್ವಾವಲಂಬನೆಯ ದಾರಿ ಬೇಕು. ಆ ದಾರಿಯ ಮೊದಲ ಹೆಜ್ಜೆ ಶಿಕ್ಷಣ, ಎರಡನೇ ರಕ್ಷಣಾ ಗೋಡೆ ಆರೋಗ್ಯ. ಅದರೊಂದಿಗೆ ಕೌಶಲ್ಯ ಮತ್ತು ಉದ್ಯೋಗ ಸೇರಿದಾಗ ಬಡತನದ ಬೇರುಗಳು ನಿಧಾನವಾಗಿ ಸಡಿಲವಾಗುತ್ತವೆ.

ಗುಣಮಟ್ಟದ ಉಚಿತ ಶಿಕ್ಷಣ, ಉತ್ತಮ ಆರೋಗ್ಯ ಸೇವೆ ಮತ್ತು ಸಮಾನ ಅವಕಾಶಗಳು ದೊರೆತಾಗ ಮಾತ್ರ ಬಡವರ ಬದುಕು ಬದುಕುಳಿಯುವ ಹೋರಾಟದಿಂದ ಸ್ವಾವಲಂಬನೆಯ ಪಯಣದತ್ತ ಸಾಗುತ್ತದೆ.

# ಪೂರ್ವಜರ ಸ್ಮರಿಸುವ ಪಿತೃಪಕ್ಷ



ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಹಿಂದೂಗಳು ವಿಶೇಷವಾಗಿ ಆಹಾರ ಅರ್ಪಣೆಗಳ ಮೂಲಕ ತಮ್ಮ ಪಿತೃಗಳಿಗೆ ಗೌರವ ಸೂಚಿಸುವ 16 ದಿನಗಳ ಅವಧಿಯಲ್ಲಿ ಆಚರಿಸುವ ಹಿರಿಯರ ಹಬ್ಬವೇ ಪಿತೃಪಕ್ಷ.

ಈ ಪಿತೃಪಕ್ಷವನ್ನು ಪಿತೃಪೋಕೋ ,ಸೋಲಾಶ್ರಾದ್ಧಾ,ಮಹಾಲಯ ಪಕ್ಷ,ಅಪರಪಕ್ಷವೆಂದು ಕರೆಯುತ್ತಾರೆ.ಪಿತೃಪಕ್ಷದ ಕೊನೆದಿನದಂದು ಮಹಾಲಯ ಅಮವಾಸ್ಯೆ ಎಂದು ಕರೆಯುತ್ತಾರೆ.ಈ ಪಿತೃಪಕ್ಷ ಬರುವ ದಿನಗಳಂದು ವಾತಾವರಣದಲ್ಲಿನ ರಜತಾತ್ಮಕ ಲಹರಿಗಳು ಮತ್ತು ಯಮಲಹರಿಗಳ ಪ್ರಭಾವವು ಹೆಚ್ಚಿನ ಪ್ರಮಾಣದಲ್ಲಿರುವದರಿಂದ ಈ ಸಮಯದಲ್ಲಿ ಶ್ರಾದ್ಧ ಕ್ರಿಯೆ ನಡೆಸಿದರೆ ರಜತಮಾತ್ಮಕ ಕೋಶಗಳಿರುವ ಪಿತೃಗಳಿಗೆ ಪೃಥ್ವಿಯ ವಾತಾವರಣ ಕಕ್ಷೆಯಲ್ಲಿ ಬರಲು ಸುಲಭವಾಗುತ್ತದೆ.ಇದೇ ಪಿತೃವರ್ಷದ ವಿಶೇಷತೆ.

ಅಗಲಿದ ಪಿತೃಗಳನ್ನು ,ಹಿರಿಯರನ್ನು ಭಕ್ತಿ ಶ್ರದ್ಧೆಯಿಂದ ನೆನೆಯುವ ಪೂರ್ವಕಾಲವೇ ಪಿತೃಪಕ್ಷ.ಹೆತ್ತ ತಂದೆತಾಯಿಯರನ್ನು ಸಾವಿನ ಬಳಿಕ ವರ್ಷವೂ ನೆನೆಯುವ ಶ್ರಾದ್ಧಕರ್ಮ ಹಿಂದೂಧರ್ಮದ ಒಂದು ವಿಶೇಷ ವರ್ಷವೂ ಬರುವ ತಿಥಿಯಂದು ಮನೆಯವರು ಮತ್ತು ಬಂಧು ಮಿತ್ರರು ಸೇರಿ ಮೃತರಾದವರನ್ನು ನೆನಪಿಸುವ ಪ್ರಕ್ರಿಯೆಯ ಹಿಂದೆ ಧಾರ್ಮಿಕ ಮಾತ್ರವಲ್ಲ ಹಲವು ವೈಚಾರಿಕ ಅಂಶವನ್ನು ನಾವು ಕಾಣುತ್ತೇವೆ.ಪಿತೃಕಾರ್ಯ ದೇವತಾಕಾರ್ಯಕಿಂತಲೂ ಮಿಗಿಲಾದುದು ಇದು.ಪಿತೃಋಣದ ಮೂಲಕ ದೇವ ಋಣ ಪೂರೈಸುವ ಅಪೂರ್ವ ಅವಕಾಶ.ಹೆತ್ತವರು ಮರಣಿಸಿದ ನಂತರ ಸ್ವರ್ಗದಲ್ಲಿ ನೆಮ್ಮದಿಯಾಗಿರಲಿ ಎನ್ನುವ ಆಶಯದೊಂದಿಗೆ ನಡೆಯುವದು ಧಾರ್ಮಿಕ ವಿಧಿಯಾದರೆ ವ್ಯಕ್ತಿಯೊಬ್ಬ ತನ್ನ ಮಕ್ಕಳ ಮೇಲೆ ಪ್ರಭಾವ ಬೀರುತ್ತಲೇ ಇರುತ್ತಾನೆ.ಅಥವಾ ಮಕ್ಕಳು ಆತನ ಪ್ರಭಾವದಿಂದ ಪಿತೃ,ಪಿತಾಮಹ,ಪ್ರಪಿತಾಮಹರ ಉದ್ಧಾರ ಸಾಧ್ಯವೆಂಬ ನಂಬಿಕೆ ಮತ್ತು ದೇವಾನುದೇವತೆಗಳ ಆಶೀರ್ವಾದ ದೊರೆಯುವದೆಂಬ ಪ್ರತೀತಿ ಇದೆ.



ಕೆಲವರಿಗೆ ಮನೆಯ ದೊಡ್ಡವರು ತೀರಿದಾಗ ತೊಂದರೆಗಳಿಂದ ಶ್ರಾದ್ಧ ಮಾಡಲು ಆಗಿರುವದಿಲ್ಲ. ಕೆಲವರಿಗಂತೂ ವಿದೇಶದಲ್ಲಿರುವವರಿಗೆ ಸತ್ತ ದಿನಾಂಕ ಕೂಡ ನೆನಪಿರುವದಿಲ್ಲ. ಅಂತಹ ಸಮಯದಲ್ಲಿ ಪಿತೃಪಕ್ಷದ ಅವಧಿಯಲ್ಲಿ ಯಾವುದೇ ದಿನದಲ್ಲಿ ಅಥವಾ ಮಹಾಲಯ ಅಮವಾಸ್ಯೆಯಂದು ಶ್ರಾದ್ಧ ಕಾರ್ಯ ನಡೆಸಿದರೆ ಪೂರ್ಣಫಲ ದೊರೆಯುವದೆಂಬ ನಂಬಿಕೆ ನಮ್ಮಲ್ಲಿದೆ.

ಅಗಲಿದ ಹಿರಿಯರಿಗೆ ಪ್ರೀಯವಾದ ಅಡುಗೆ ಮಾಡಿ ತಿಲತರ್ಪಣ,ಜಲತರ್ಪಣ,ಬಲಪಿಂಡ ಪ್ರಧಾನ, ಬಡವರಿಗೆ ದಾನಮಾಡಿ ಪಿತೃಗಳನ್ನು ಸಂತುಷ್ಟಗೊಳಿಸಲಾಗುತ್ತದೆ. ಕೆಲವು ಆಚರಣೆಗಳು ಸಮುದಾಯಗಳ ನಡುವೆ ಪ್ರೀತಿಯನ್ನು ವ್ಯಕ್ತಪಡಿಸುವ ಉದ್ದೇಶದಿಂದ ಹಾಗೂ ಭಕ್ತರ ಆಶೀರ್ವಾದ ಪಡೆಯಲುಇತರರ ಜೀವನದಿಂದ ಕೆಲವು ಸಮಸ್ಯೆ ತೆಗೆದು ಹಾಕಲು ಅನುಸರಿಸುವ ಉದ್ದೇಶ ಹೊಂದಿರುತ್ತಾರೆ.

ಪಿತೃಪಕ್ಷದಲ್ಲಿ ತಿಥಿಯನ್ನು ಮಾಡುವದು ನಮ್ಮ ಪೂರ್ವಿಕರಿಗೆ ಸಮಾಧಾನ ಮಾಡುವ ಪ್ರಕ್ರಿಯೆಯಾಗಿದೆ. ಅತೃಪ್ತಿಯಿಂದ ಮರಣಹೊಂದಿದಲ್ಲಿ ಅವರ ಹೆಸರಿನಲ್ಲಿ ತಿಥಿ ಮಾಡಿ ಇಷ್ಟದ ಅಡುಗೆ ಮಾಡಿ ಕಾಗೆಗೆ ಉಣಬಡಿಸಲಾಗುತ್ತದೆ. ಈ ಸಮಯದಲ್ಲಿ ಹಿರಿಯರಿಗೆ ಪ್ರಾರ್ಥನೆಗಳ ಮೂಲಕ ಗೌರವ ಮತ್ತು ಅರ್ಪಣೆ ನೀಡಬೇಕು.ಹಿರಿಯರು ಮರಣದ ನಂತರ ಪಿತೃಲೋಕ ಸೇರುತ್ತಾರೆ. ಪಿತೃಗಳು ತಮಗೆ ತಾವೇ ಆಹಾರ ಸೇವಿಸಲಾರರು. ಅವರ ಮಕ್ಕಳು ಅವರ ಕಾರ್ಯ ಮಾಡುವ ವಾಡಿಕೆ ನಮ್ಮಲ್ಲಿದೆ. ಭಾದ್ರಪದ ತಿಂಗಳಿಗೆ ಪ್ರತೀವರ್ಷ ಪಿತೃಪಕ್ಷ ಆಚರಿಸಲಾಗುತ್ತದೆ.ಪೂರ್ಣ ಚಂದ್ರೋದಯದಂದು ಇದು ಪ್ರಾರಂಭವಾಗುತ್ತದೆ.ಜನನ ಮರಣಗಳಿಗೆ ಜಾತಿ ಬೇಧಗಳಿಲ್ಲ .ಹಾಗೆಯೇ ಪಿತೃಪಕ್ಷದಂದು ಪಿತೃಕಾರ್ಯ ಮಾಡುವದಕ್ಕೂ ಜಾತಿ ಬೇಧಗಳಿಲ್ಲ.ಹೀಗಾಗಿ ಎಲ್ಲ ಸಮುದಾಯದವರೂ ಪಿತೃಪಕ್ಷ ಮಾಡುವ ಮೂಲಕ ಅಗಲಿದ ಪಿತೃಗಳಿಗೆ ತರ್ಪಣ ನೀಡಿ ಧನ್ಯರಾಗುತ್ತಾರೆ.

# ಸಾವಿನ ಕುರಿತಾದ ಅಜ್ಞಾನವೇ ರೋಗದ ಮೂಲ



ಸಾವಿನ ಅರಿವಿಲ್ಲದಿರುವುದು ನೋವಿನ ಬೀಜ. ಅಂತ್ಯ ಎಂದರೆ ಕತ್ತಲು ಎಂದು ಭಾವಿಸಿದಾಗ ಮನಸ್ಸಿನಲ್ಲಿ ಥಾನಾಟೋಫೋಬಿಯ ಮೊಳಕೆಯೊಡೆಯುತ್ತದೆ. ಇದು ಅಡ್ರಿನಲ್? ಗ್ರಂಥಿಯನ್ನು ಕೆರಳಿಸಿ, ಪ್ರೋಇನ್ಫ್ಲಾಮೇಟರಿ ಕಣಗಳನ್ನು ಹೆಚ್ಚಿಸುತ್ತದೆ. ಜಪಾನ್‌ನ ಅಧ್ಯಯನ ಹೇಳುತ್ತದೆ: ಸಾವಿನ ನಿಜವನ್ನು ಕಲಿಯದವರಿಗೆ ನಿದ್ರಾಹೀನತೆ, ಅಜೀರ್ಣ, ತಲೆಸುತ್ತು ಜಾಸ್ತಿ. ಸಾವಿನ ಸತ್ಯ ತಿಳಿದರೆ, ದೇಹದೊಳಗಿನ ಬಿರುಗಾಳಿ ಶಾಂತವಾಗುತ್ತದೆ.

ಅಜ್ಞಾನ ಸಮುದಾಯದ ನೆಮ್ಮದಿ ಕೆಡಿಸುತ್ತದೆ. ಮರಣ ಪದ ಕೇಳಿದರೆ ಕಿವಿ ಮುಚ್ಚುವ ಅಜ್ಜ, ಮನೆಯ ಹುಡುಗರಿಗೆ ಮೌಢ್ಯದ ಬಳ್ಳಿ ಹಬ್ಬಿಸುತ್ತಾನೆ. ಇದರಿಂದ ತರುಣರು ಚಿಕಿತ್ಸೆಗೆ ಹಿಂಜರಿಯುತ್ತಾರೆ. ಆದರೆ, ಬಾಡಿದ ಹೂವು ಬೀಜವಾಗುತ್ತದೆ ಎಂದು ಕಥೆ ಹೇಳುವ ಗ್ರಂಥಪಾಲಕ, ಓದುಗರಿಗೆ ಮರುಹುಟ್ಟಿನ ಭರವಸೆ ಕೊಡುತ್ತಾನೆ. ರಸ್ತೆ ಅಪಘಾತದಲ್ಲಿ ನೆರವಾದವರ ಅಂಗಾಂಗ ಬಳಕೆಗೆ ಒಪ್ಪಿಗೆ ಕೊಡುವ ಕುಟುಂಬ, ಐದು ಜನರ ಕಣ್ಣಿಗೆ ಬೆಳಕಾಗುತ್ತದೆ. ಸಾವಿನ ತಿಳಿವು ಇರುವ ಕೇರಿಯಲ್ಲಿ ಅನವಶ್ಯಕ ದುಗುಡ ಇಲ್ಲ.

ಅಜ್ಞಾನ ತೊಲಗಿಸಲು ಹೀಗೆ ಅಭ್ಯಾಸ ಮಾಡಿ: ಹುಣ್ಣಿಮೆ ರಾತ್ರಿ ತಾರಸಿಯ ಮೇಲೆ ಮಲಗಿ, ಚಂದ್ರ ಕೂಡ ಕರಗುತ್ತಾನೆ, ಮತ್ತೆ ಬೆಳೆಯುತ್ತಾನೆ ಎಂದು ಗಮನಿಸಿ. ವಯಸ್ಸಾದ ನೆರೆಹೊರೆಯವರ ಬಳಿ ಜೀವನದ ಪಾಠ ಏನು ಎಂದು ಪ್ರಶ್ನಿಸಿ, ಅವರ ಮಾತು ದಾಖಲಿಸಿ. ಮನೆಯಲ್ಲಿ ಹಾಲು ಹೆಪ್ಪು ಹಾಕುವಾಗ, ರೂಪ ಬದಲಾವಣೆಯೇ ನಿಯಮ ಎಂದು ಮಕ್ಕಳಿಗೆ ತೋರಿಸಿ. ಪ್ರತಿ ಅಮಾವಾಸ್ಯೆ ದಿನ ಹಳೆಯ ಪೇಪರ್ ಸುಟ್ಟು, ಬೂದಿಯಿಂದಲೇ ಗೊಬ್ಬರ ಎಂದು ನೆನಪಿಸಿ. ಆಗ ಸಾವು ಕ್ರಿಯೆಯ ಭಾಗವೆನಿಸುತ್ತದೆ.

ಸಾವಿನ ಸುತ್ತಲಿನ ಮಂಜು ಕರಗಿದರೆ, ಬದುಕಿನ ಬಣ್ಣ ಅರಳುತ್ತದೆ. ಅಜ್ಞಾನದ ಬೇರು ಕಿತ್ತರೆ, ಆರೋಗ್ಯದ ಮರ ಚಿಗುರುತ್ತದೆ. ಸಾವನ್ನು ಅರಿತವನಿಗೆ ನೋವು ಕೂಡ ಪಯಣದ ಗೆಳೆಯ.

ಅಂಕಣ-33
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

# ತಪ್ಪಿನ ಅರಿವೇ ಬದುಕಿನ ದಾರಿ...



ಆನಂದ ಜಿ.ಎಸ್, ದಾಂಡೇಲಿ

ಬದುಕಿನ ಪಯಣ ಎಂಬುದು ಯಾರಿಗೂ ಹೇಳಿ ಕೇಳಿ ಬರುವಂತದ್ದಲ್ಲ, ಸಮಯಕ್ಕೆ ತಕ್ಕಂತೆ ಬರುವ ಅದಕ್ಕೆ ನೆಪ ಮಾತ್ರ ಕಾರಣಗಳಾಗುತ್ತವೆ.ಅಂತಹ ಬದುಕಿನ ಪಯಣದಲ್ಲಿ ಪ್ರತಿ ಜೀವಿಗೂ ಅನೇಕ ಏರಿಳಿತಗಳು ಸಹಜ ಅಂತಹ ಸನ್ನಿವೇಶಗಳಲ್ಲಿ ಆಗುವ ನಮ್ಮ ತಪ್ಪನ್ನು ನಾವು ಸ್ವೀಕರಿಸದೆ ಹೋದಾಗ,ಅದು ನಮ್ಮಿಂದ ಮತ್ತೆ ಮತ್ತೆ ಪುನರಾವರ್ತನೆ ಆಗುತ್ತಲೇ ಇರುತ್ತದೆ.

ಅದು ನಮ್ಮ ಜವಾಬ್ದಾರಿಯನ್ನು ಮರೆಮಾಚಿ,ನಮ್ಮ ಮೌಲ್ಯಗಳನ್ನೇ ಅದುಮಿ,

"ನಾವೇ ಸರಿ,ನಮ್ಮದೇ ಸರಿ" ಎನ್ನುವ

ಮೊಂಡು ಹಠಕ್ಕೆ ತಿರುಗಿ,

ಕೊನೆಗೆ ನಮ್ಮ ಬದುಕನ್ನೇ ನುಂಗಿ ನೀರು ಕುಡಿದುಬಿಡುತ್ತದೆ.

ಒಂದು ವೇಳೆ ನಮ್ಮ ಪಯಣ ತಿಳಿ ಹೇಳುವ ಹಿರಿಯ ಜೀವಗಳ ಮಧ್ಯದಲ್ಲಿ ಸಾಗಿದರೆ,

ಬದುಕಿನ ಸಾರ ತಿಳಿದು ಗಂಧ ತೀಡಿ ಸುಂದರ ಘಮದಂತೆ ನವಚೇತನ ಚಿಮ್ಮಿ ಬದುಕು ಬಂಗಾರವಾಗುವುದರಲ್ಲಿ ಸಂಶಯವಿಲ್ಲಾ.

ಅದೇ, ನಾವು ಹೇಳಿದ್ದಕ್ಕೆಲ್ಲ "ಅಹುದಹುದು" ಎನ್ನುವಂತಹ

ತಾಳ ತಟ್ಟುತ್ತ ಮರೆಯಲ್ಲಿ ನಿಂತು ಮೋಜು ನೋಡುವ ಹಿಂಬಾಲಕರು ಸಿಕ್ಕಾಗ,ಬದುಕು ದಾರಿ ತಪ್ಪುತ್ತಾ ಸಾಗಬಹುದು.

ಇಂದು ಅಲ್ಲದಿದ್ದರೂ ಮುಂದೊಂದು ದಿನ ಪರಿತಪಿಸುವ ಕಾಲ ಕಟ್ಟಿಟ್ಟ ಬುತ್ತಿ ಎಂಬುದನ್ನು ಮರೆಯಬಾರದು. ಅದಲ್ಲದೆ ನಾವು ಸಾಗುವ ದಾರಿ,

ನಮ್ಮ ಹಿರಿಯರು ಮಾಡಿದ ಪುಣ್ಯ-ಪಾಪಗಳ ಫಲಶ್ರುತಿ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಏಕೆಂದರೆ ಸಾಗುವ ನಮ್ಮ ದಾರಿಯಲ್ಲಿ ದಾರಿಹೋಕರಂತೆ ಸಿಗುವವರು,

ನಮ್ಮ ಹಿರಿಯರ ಗೆಳೆಯರೇ ಇರಬಹುದು,ಇಲ್ಲಾ ಅವರ ಮಕ್ಕಳೇ ಆಗಿರಬಹುದು.ಅವರು ನಮ್ಮನ್ನು ನಮ್ಮ ಕುಟುಂಬವನ್ನು ಅನೇಕ ದಿನಗಳಿಂದ ಗಮನಿಸಿಯೇ ಇರುತ್ತಾರೆ ಮತ್ತು ಅವರಿಗೆಲ್ಲ ಅದರ ಅರಿವು ಇರುವುದರಿಂದಲೇ,

ಅವರು ನಮ್ಮೊಂದಿಗೆ ಹೆಜ್ಜೆ ಹಾಕುವರೋ ಇಲ್ಲಾ ಹೆಜ್ಜೆ ಹಾಕದಿರುವರೇನೋ? ಎನ್ನುವುದು ನನ್ನ ನಂಬಿಕೆ.. ನೀವೇನಂತೀರಿ..??

# 50ನೇ ವರ್ಷಕ್ಕೆ ಪಾದಾರ್ಪಣೆ

## ಚನ್ನಂಗೆರೆ ಸಹಕಾರ ಸಂಘದಲ್ಲಿ ಸಂಭ್ರಮ

**ಕೆ.ಆರ್.ನಗರ:** ತಾಲೂಕಿನ ಚನ್ನಂಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 50ನೇ ವರ್ಷಕ್ಕೆ ಪಾದರ್ಪಣೆ ಮಾಡಿದ ಹಿನ್ನಲೆಯಲ್ಲಿ ಸಂಘದಲ್ಲಿ ಕೇಕ್ ಕತ್ತರಿಸಿ, ಹಿರಿಯ ರೈತ ಸದಸ್ಯರುಗಳನ್ನು ಸನ್ಮಾನಿಸುವ ಮೂಲಕ ಸಂಭ್ರಮ ಆಚರಣೆ ಮಾಡಲಾಯಿತು.

ಸಂಘದ ಅಧ್ಯಕ್ಷ ಸಿ.ವೈ.ಅಭಿಲಾಶ್ ಮಾತನಾಡಿ ಸಂಘವು ಸ್ಥಾಪನೆಗೊಂಡು ಐವತ್ತನೇ ವಸಂತಕ್ಕೆ ಕಾಲಿಟ್ಟಿರುವ ಈ ಸಂದರ್ಭದಲ್ಲಿ ಸಂಘದ ಬೆಳವಣಿಗೆಗೆ ಶ್ರಮಿಸಿದ ಹಿರಿಯ ಸಹಕಾರಿಗಳು, ಆಡಳಿತ ಮಂಡಳಿಯವರು, ರೈತರುಗಳು, ಹಾಗೂ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಸಂಘವು ಗಣಕೀಕೃತ ಆಡಳಿತ ವ್ಯವಸ್ಥೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ರಾಜ್ಯದಲ್ಲೇ ಉತ್ತಮ ಸಂಘವೆಂದು ಕೇಂದ್ರ ಸರ್ಕಾರದ ಗೃಹ ಸಚಿವ ಅಮಿತ್ ಶಾ ಅವರಿಂದ ಪ್ರಶಸ್ತಿಯನ್ನು ಪಡೆಯಲಾಗಿದ್ದು ಇದು ಸಂಘಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಸಂಘದ ಮತ್ತಷ್ಟು ಬೆಳವಣಿಗೆಗೆ ಸಂಘದ ಆಡಳಿತ ಮಂಡಳಿಯವರು, ಹಿರಿಯ ಸಹಕಾರಿಗಳು, ರೈತ ಸದಸ್ಯರುಗಳು ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಸರ್ವರೂ ಸಹಕಾರ ನೀಡಬೇಕೆಂದು ಮನವಿ ಮಾಡಿದರು.



ಕಾರ್ಯಕ್ರಮದಲ್ಲಿ ಹಿರಿಯ ರೈತ ಸದಸ್ಯರುಗಳಾದ ಸಿ.ಎಂ.ರಾಜೇಗೌಡ, ನಾಗಪ್ಪ, ಮಂಜೇಗೌಡ ಅವರುಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಶಂಕರನಾಯಕ, ನಿರ್ದೇಶಕರಾದ ಪುಟ್ಟೇಗೌಡ, ಸಿ.ಕೆ.ಮಲ್ಲಿಕಾರ್ಜುನ, ಸಿಇಓ ಆರ್.ಮಂಜು, ಸಹಾಯಕಿ ಕೆ.ಎನ್.ಧನಲಕ್ಷ್ಮಿ, ಶಿಕ್ಷಕ ಸಿ.ಎನ್.ಪ್ರಭು, ಮುಖಂಡರುಗಳಾದ ಮೋಹನ್ ಕುಮಾರ್, ಧನಂಜಯ, ಎಟಿಮಂಜು, ಸ್ವಾಮಿಗೌಡ, ಚಂದ್ರೇಗೌಡ, ಪ್ರಕಾಶ್, ಮಧು, ತ್ರಿವೇಣಿ, ಕಾವೇರಿ ಸೇರಿದಂತೆ ಹಲವರು ಇದ್ದರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,